iJRASET
International Journal For Research in Applied Science and Engineering Technology



INTERNATIONAL JOURNAL FOR RESEARCH

IN APPLIED SCIENCE & ENGINEERING TECHNOLOGY

Volume: 10 **Issue:** II **Month of publication:** February 2022

DOI: https://doi.org/10.22214/ijraset.2022.40544

www.ijraset.com

Call: 08813907089 | E-mail ID: ijraset@gmail.com

International Journal for Research in Applied Science & Engineering Technology (IJRASET)
ISSN: 2321-9653; IC Value: 45.98; SJ Impact Factor: 7.538
Volume 10 Issue II Feb 2022- Available at www.ijraset.com

Nithya Kalyana Special Program in Month of Shravana of Murughamath of Chitrhradurga under the Blessings of Dr. Sri. Shivamurthy Murugha Sharanaru- A Study

Ananda. S.
M. A., M.PHIL, [PH.D]
Assistant Professor, Department of Sociology, S.J.M. Arts, Science & Commerce College Chandravalli, Chithradurga-577501

Abstract: ***Nithya Kalyana-Which means there are two terms Nithya and Kalyana, Nithya which means Daily, Kalyana means Welfare. So totally the meaning of Nithya Kalyana, Daily welfare of Society, especially poor, needy, physically disabled person. Welfare is the good fortune, health, happiness, prosperity, etc., of a person, group, or organization; well-being:Welfare is the state of good health, happiness and comfort or financial assistance from the government.The month of Shravana is coming in August and September, The Indian Society especially in Karnataka traditional citizens worshiping the Cobra or Snake, Cobra is a representative of god that is believe of traditional citizens. And they practiced the Milk infusion. But scientifically the Cobra can't drink liquid food. Especially the traditional citizens Milk infusion on Stone Cobra, and Worshipping the Stone Cobra. That is meaningless practice, no use to anybody, So many peoples, children, dying daily without food in country. In this situation, we are citizen of India we must create the general awareness among the traditional citizens about meaningless practices. But they can't listen of our suggestions. The vigilance programme conducted by Three Vidha Dasohigalu, [Education, Food, Occupation] [THREE TYPES DONER] Dr.Shivamurthy Murugha Sharanaru of Murugha math.***

Keywords: ***DR.SHARANARU, MURUGHAMATH, DASOHA, EDUCATION, WORK, NITHYA KALYANA, WELFARE, CHILDEREN.***

I. INTRODUCTION

ಧನ್ಯತೆಯ ಬದುಕು ದೇವಾಲಯದೊಳು ದೇವರನು ಕಾಣುವವರ ಸಂಖ್ಯೆ ಅಪರಿಮಿತ ನೋಡ, ದೇಶವನೇ ದೇವಾಲಯವೆಂದು ಭಾವಿಸುವವರ ಸಂಖ್ಯೆಯು ಬೆಳೆಯುತಿಹುದು ನೋಡ, ದೇಹವನೇ ದೇವಾಲಯವೆಂದು ಅರಿತು ಆಚರಿಸುವವರು ಕೆಲವರು ನೋಡ, ಬಸವಪ್ರಭು ಮುರುಘೇಶ ದೀನ ದುಃಖಿತ ವಿಕಲಚೇತನ ಅಮಾಯಕರ ಸೇವೆಯೊಳು ಸಾರ್ಥಕತೆ ಕಾಣುವವರದು ಧನ್ಯತೆಯ ಬದುಕು ನೋಡ.





In the Temple of Enlightenment, the number of those who see God as an infinite sight, the number of those who think of the country as a temple, grow and see that the body is a temple.

II. MEANING

Nithya Kalyana-Which means there are two terms Nithya and Kalyana, Nithya which means Daily, Kalyana means Welfare. So totally the meaning of Nithya Kalyana, Daily welfare of Society, especially poor, needy, physically disabled person.

Welfare is the good fortune, health, happiness, prosperity, etc., of a person, group, or organization; well-being:

Welfare is the state of good health, happiness and comfort or financial assistance from the government.

The month of Shravana is coming in August and September, The Indian Society especially in Karnataka traditional citizens worshiping the Cobra or Snake, Cobra is a representative of god that is believe of traditional citizens. And they practiced the Milk infusion. But scientifically the Cobra can't drink liquid food.

Especially the traditional citizens Milk infusion on Stone Cobra, and Worshipping the Stone Cobra.

That is meaningless practice, no use to anybody, So many peoples, children, dying daily without food in country. In this situation, we are citizen of India we must create the general awareness among the traditional citizens about meaningless practices. But they can't listen of our suggestions. The vigilance programme conducted by Three Vidha Dasohigalu, [Education, Food, Occupation] [THREE TYPES DONER] Dr.Shivamurthy Murugha Sharanaru of Murugha math.

In 09/08/2021 Monday the program inaugurated by Dr. Sharnaru in the residence of Thippamma Venkatesh as a President of Chithradurga Nagarasbhe. In that day Sharanaru Said the Spirituality is support to the development of life, Mind, Brain, and Body evoluating by spirituality. The program was took place in 12th century, next repeated in 21st century. The Murugha Math provides equal status to men and women in all sectors. Life and principles are not separate. Buddha, Basava, Yesu, believed in the principles. Today we may be observed the principles, but not achievers. Those who are accept the both true and false they will be a real devotee.



ಆಧ್ಯಾತ್ಮದಿಂದ ಬದುಕಿನ ಉನ್ನತಿ ಸಾಧ್ಯ

ಚಿತ್ರದುರ್ಗ: ಮುರುಘಾ ಮಠವು ಶ್ರಾವಣಮಾಸದ ಅಂಗವಾಗಿ ನಗರದ ಮತ್ತು ಗ್ರಾಮಗಳ ಸದ್ಭಕ್ತರ ಮನೆಗಳಲ್ಲಿ ಸೆಪ್ಟೆಂಬರ್ 6ವರೆಗೆ ಹಮ್ಮಿಕೊಂಡಿರುವ 'ನಿತ್ಯಕಲ್ಯಾಣ' ವಿಶೇಷ ಕಾರ್ಯಕ್ರಮ (ಅಂತರ್ಜಾಲ)ಕ್ಕೆ ಸೋಮವಾರ ನಗರಸಭೆ ಅಧ್ಯಕ್ಷೆ ತಿಪ್ಪಮ್ಮ ವೆಂಕಟೇಶ್ ನಿವಾಸದಲ್ಲಿ ಚಾಲನೆ ದೊರೆಯಿತು.

ಸಮಾರಂಭ ಸಾನ್ನಿಧ್ಯ ವಹಿಸಿದ್ದ ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ಆಧ್ಯಾತ್ಮದಿಂದ ಬದುಕಿನಲ್ಲಿ ಉನ್ನತಿ ಸಾಧ್ಯ. ಜೀವನದಲ್ಲಿ ಎದುರಾಗುವ ಎಲ್ಲ ಬೇಸರ, ಚಂಚಲತೆ, ಗೊಂದಲ ಆಶಾಂತಿ ಹಾಗೂ ಅಸಹನೆಯನ್ನು ನಿವಾರಿಸುವ ಶಕ್ತಿ ಆಧ್ಯಾತ್ಮದ ಚಿಂತನೆ, ಮಂಥನಕ್ಕೆ ಇದೆ ಎಂದರು.

ಮುರುಘಾ ಶರಣರು

ಕಲ್ಯಾಣ ಜೀವನದ ಅಂಗವಾಗಬೇಕು. ಸ್ವಲ್ಪ ತಿಂದರೆ ಚೈತನ್ಯ, ಹೊಳ ತಿಂದರೆ ಅದು ರೋಗ. ಆಧ್ಯಾತ್ಮದಿಂದ ಶರೀರ, ಇಂದ್ರಿಯ, ಬುದ್ಧಿಯ ವಿಕಸನವಾಗುತ್ತದೆ. ನಾವು ಶ್ರಮ ಸಂಸ್ಕೃತಿಯನ್ನು ಆಚರಿಸಬೇಕು. ತಾತ್ವಿಕ ಜಿಜ್ಞಾಸೆಗೆ ಒಳಗಾಗಬೇಕು. ಆಗ ಜೀವನ ಬೇರೆಯಲ್ಲ ತತ್ವ ಬೇರೆಯಲ್ಲ ಎಂಬ ಅರಿವನ್ನು ಪಡೆಯಲು ಸಾಧ್ಯ. ಆಮಿಷಗಳಿಗೆ ಒಳಗಾಗಬಾರದು. ಬುದ್ಧ, ಬಸವ, ಏಸು ಮೊದಲಾದ ದಾರ್ಶನಿಕರು ನಂಬಿದ ತತ್ವ ಬಿಟ್ಟುಕೊಡಲಿಲ್ಲ. ತತ್ವ ಬಿಟ್ಟ ಬದುಕು ಯಕಶ್ಚಿತ. ಇಂದು ತತ್ವಗಳಿವೆ. ಆದರೆ, ತತ್ವ ಸಾಧಕರು ಸಿಗುತ್ತಿಲ್ಲ. ತಪ್ಪು- ಒಪ್ಪುಗಳನ್ನು ಸಮರ್ಪಣೆ ಮಾಡಿಕೊಂಡಾಗ ನಿಜವಾದ ಭಕ್ತರಾಗಬಹುದು. ಇಂತಹವರ ಸಂಖ್ಯೆ ಹೆಚ್ಚಾಗಬೇಕೆಂದರು.

ಶರಣರ ರಚಿತ ಅನುಭವಯಾನ ಕೃತಿ ಬಿಡುಗಡೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ನಿತ್ಯ ಕಲ್ಯಾಣ ಕಾರ್ಯಕ್ರಮ ಅಂದಿನ ಅನುಭವ ಮಂಟಪವನ್ನು ನೆನಪಿಸುತ್ತದೆ. ಅಂದಿನ ಶರಣರನ್ನು ನೋಡಲು ಸಾಧ್ಯವಾಗಿರಲಿಲ್ಲ. ಆದರೆ, ನಾವಿಂದು ಇಲ್ಲಿ ನೋಡಬಹುದು. 12ನೇ ಶತಮಾನದಲ್ಲಿ ಬಂದ ಕಲ್ಯಾಣ 21ನೇ ಶತಮಾನದಲ್ಲಿ ಮತ್ತೆ ಪ್ರಾರಂಭವಾಗಿದೆ. ಅದಕ್ಕೆ ಶರಣರು ಭದ್ರ ಬುನಾದಿ ಹಾಕಿದ್ದಾರೆ. ಬುದ್ಧ, ಮಹಾವೀರ, ಬಸವಣ್ಣನವರು ಬಂದಂತೆ ಮುರುಘಾ ಶರಣರು ಬಂದಿದ್ದಾರೆ. 12ನೇ ಶತಮಾನದ ಕಲ್ಯಾಣವನ್ನು ನೋಡಿಲ್ಲ. ಆದರೆ, ಈಗ ಮುರುಘಾಮಠದಲ್ಲಿ ಕಲ್ಯಾಣವನ್ನು ನೋಡುತ್ತಿದ್ದೇವೆ. ದಲಿತರು ತುಳಿತಕ್ಕೆ ಒಳಗಾದ ಸಂದರ್ಭದಲ್ಲಿ ಸ್ಥಳಕ್ಕೆ ತೆರಳಿ ಶರಣರು ಪರಿಸ್ಥಿತಿ ತಿಳಿಗೊಳಿಸಿದ್ದಾರೆ ಎಂದರು.

12ನೇ ಶತಮಾನದಲ್ಲಿ ಸತ್ಯಕ್ಕ, ಮುಕ್ತಾಯಕ್ಕ ಮೊದಲಾದವರಿಗೆ ಅವಕಾಶ ಇತ್ತು. ಅದರಂತೆ ಮುರುಘಾ ಮಠದಲ್ಲಿ ಗರ್ಭಗುಡಿಗೆ ಮಹಿಳೆಯರು ಹೋಗಬಹುದಾಗಿದೆ ಎಂದರು. ನಗರಸಭೆ ಅಧ್ಯಕ್ಷೆ ತಿಪ್ಪಮ್ಮ ವೆಂಕಟೇಶ್ ದಂಪತಿ, ವಕೀಲ ಪಾತ್ಯರಾಜನ್, ಜಿ.ಎಸ್. ಉಜ್ಜಿನಪ್ಪ, ಮೋಕ್ಷ ರುದ್ರಸ್ವಾಮಿ, ರಾಜು ಫಾದರ್, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಚಿ. ಪರಮಶಿವಯ್ಯ ಇದ್ದರು. ಎನ್.ಮಮತಾ ನಿರೂಪಿಸಿದರು.

In 2nd day 10/08/2021 Tuesday the program conducted by Sri Sheshanna of Speech Institution in Bhovana Narsury. In this Dr.Sharanaru delivered the speech on Development and Spirituality. Without development spirituality is reserved for the only teaching. Kayaka culture was belonging to Sharanaru, Charaka Culture was belonging to Gandhiji, The truth is support to development, Spirituality is internal but development is external. So both are essential to development of personality



ಅಭಿವೃದ್ಧಿ ರಹಿತ ಅಧ್ಯಾತ್ಮ ಬೋಧನೆಗೆ ಸೀಮಿತ!

■ ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಅಭಿವೃದ್ಧಿ ರಹಿತ ಅಧ್ಯಾತ್ಮವು ಬೋಧನೆಗೆ ಮಾತ್ರ ಸೀಮಿತ ಎಂಬ ಚಿತ್ರದುರ್ಗ ಮುರುಘಾ ಮಠದ ಡಾ.ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಗೋನೂರಿನ ಭೂವನ ನರ್ಸರಿಯಲ್ಲಿ ಮಂಗಳವಾರ ಆಯೋಜಿಸಿದ್ದ ನಿತ್ಯಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅಧ್ಯಾತ್ಮ ಮತ್ತು ಅಭಿವೃದ್ಧಿ ಎರಡನ್ನು ಸಾಧಿಸಬಹುದೆ ಎಂಬ ಕುರಿತು ವಿಷಯ ಮಂಡಿಸಿದರು.

ಕೆಲವರದ್ದು ಅಧ್ಯಾತ್ಮ ರಹಿತ ಅಭಿವೃದ್ಧಿಯಾದರೆ ಇನ್ನೂ ಕೆಲವರದ್ದು ಅಧ್ಯಾತ್ಮ ಸಹಿತ. 12ನೇ ಶತಮಾನದ ಬಸವಾದಿ ಶರಣರದ್ದು ಕಾಯಕ ಸಂಸ್ಕೃತಿಯಾಗಿದ್ದರೆ, ಗಾಂಧೀಜಿ ಅವರದ್ದು ಚರಕ ಸಂಸ್ಕೃತಿ ಆಗಿತ್ತು ಎಂದರು. ಗಾಂಧೀಜಿ ಅವರ ಸತ್ಯಾಗ್ರಹವು ಅಭಿವೃದ್ಧಿ ಪರವಿತ್ತು. ಅಧ್ಯಾತ್ಮ ಅಂದರೆ ಅಂತಃಕರಣ. ಅಭಿವೃದ್ಧಿ ಅಂದರೆ ಭೌತಿಕವಾದದ್ದು ಎಂದು ವಿಶ್ಲೇಷಿಸಿದರು.

ಸಮ್ಮುಖ ವಹಿಸಿದ್ದ ಶ್ರೀ ಬಸವನಾಗಿದೇವ ಸ್ವಾಮೀಜಿ ಮಾತನಾಡಿ,ಬಸವಣ್ಣನ ಪರಂಪರೆ ನಡೆನುಡಿಗಳದು ಎಂಬ ಕಾರಣಕ್ಕೆ ಮುರುಘಾ ಶರಣರು ಎಲ್ಲ ಜಾತಿ, ಜನಾಂಗದವರಿಗೆ ದೀಕ್ಷೆ ನೀಡಿ ಸಮಾಜಸೇವೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಸ್ಟೀಲ್ ಸಂಸ್ಥೆಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನವನ್ನು ಸಸಿ ನೆಡುವ ಮೂಲಕ ಶರಣರು ಉದ್ಘಾಟಿಸಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಕೆ. ಜೋಳರಾಜಪ್ಪ, ಗೋನೂರು ಗ್ರಾಪಂ ಅಧ್ಯಕ್ಷೆ ಗೀತಾ ಕುಮಾರ್, ನಬಾರ್ಡ್‌ನ ಅಭಿವೃದ್ಧಿ ಅಧಿಕಾರಿ ಕವಿತಾ ಕಶಿಧರ್, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಚಿ. ಪರಮಶಿವಯ್ಯ, ಜೆಎಂಐಟಿ ಪ್ರಾಂಶುಪಾಲ ಡಾ.ಬಿ.ಸಿ.ಕಾಂತಪ್ಪ, ಪಿಡಿಒ ಎಚ್. ಯರ್ರಿಸ್ವಾಮಿ, ಜೈವಿಕ ಇಂಧನ ಮುಖ್ಯ ಸಂಯೋಜಕ ಡಾ.ಪಿ.ಬಿ.ಭರತ್, ಎಚ್. ಸಿ.ನಿರಂಜನಮೂರ್ತಿ,ಎಚ್. ಕೇಶಪ್ಪ ಮತ್ತಿತರರು ಇದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಕೇಷಣ್ಣ ಸ್ವಾಗತಿಸಿದರು.

ಚಿತ್ರದುರ್ಗ ಹೊರವಲಯ ಗೋನೂರು ಭೂವನದಲ್ಲಿ ಮಂಗಳವಾರ ಡಾ.ಮುರುಘಾ ಶರಣರು ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನವನ್ನು ಉದ್ಘಾಟಿಸಿದರು. ಜೆಪಂ ಸಿಇಒ ಡಾ.ಕೆ.ನಂದಿನಿದೇವಿ,ಉಪಅರಣ್ಯ ಸಂರಕ್ಷಣಾಧಿಕಾರಿ ಎಂ.ಕೆ.ಜೋಳರಾಜಪ್ಪ, ಗೋನೂರು ಗ್ರಾ.ಪಂ.ಅಧ್ಯಕ್ಷೆ ಗೀತಾ ಕುಮಾರ್,ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಕವಿತಾ ಕಶಿಧರ್ ಮತ್ತಿತರರು ಇದ್ದರು.

ಜೈವಿಕ ಇಂಧನದ ಬಗ್ಗೆ ಎಲ್ಲರಿಗೂ ಮಾಹಿತಿ ಇದೆ. ಮುಂದಿನ 20 ವರ್ಷಗಳಲ್ಲಿ ತಾಪಮಾನ ಹೆಚ್ಚಾಗಲಿದ್ದು ನಾವು ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆ ಮಾಡಬೇಕಿದೆ. ಮರ ಗಿಡಗಳನ್ನು ಹೆಚ್ಚಾಗಿ ಬೆಳೆಸಬೇಕು.

| ಡಾ.ಕೆ.ನಂದಿನಿದೇವಿ ಸಿಇಒ, ಜಿ.ಪಂ. ಚಿತ್ರದುರ್ಗ

Where the Caste there is Untouchability, Casteism is principle reason to backward to Nation.

11/08/2021 Wednesday what are the obstacles to Social Harmony. The third day of Nithya Kalyana Program the Dr. Sharanaru Said, We may be observed the women's present in all functions and meetings, because it is contribution of Basavanna. The temple Culture [Devaalaya Sanskruthi] is became an Inert culture [Jada Sanskruthi] Jeevalaya Sanskruthi is belongs to Sharana's culture. We support to the Secular principles.



ದೇಶದ ಹಿನ್ನಡೆಗೆ ಜಾತಿವಾದ ಕಾರಣ

ಶ್ರೀ ಶಿವಮೂರ್ತಿ ಶರಣರ ಅಭಿಪ್ರಾಯ | ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ

ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಜಾತಿವಾದ ಇದ್ದಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತದೆ. ದೇಶದ ಪ್ರಗತಿ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿನ ಹಿನ್ನಡೆಗೆ ಜಾತಿವಾದವೇ ಮುಖ್ಯ ಕಾರಣ ಎಂದು ಶ್ರೀ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ನಗರದ ಐಯುಡಿಪಿ ಬಡಾವಣೆಯಲ್ಲಿ ಬುಧವಾರ ಆಯೋಜಿಸಿದ್ದ ನಿತ್ಯ ಕಲ್ಯಾಣ 3ನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸಾಮಾಜಿಕ ಸಾಮರಸ್ಯಕ್ಕೆ ಎದುರಾಗುವ ಅಡಚಣೆಗಳೇನು? ವಿಷಯ ಚಿಂತನ ಮಾಡಿದರು.

ಅನೇಕ ಅಮಾನವೀಯ ಸಂದರ್ಭಗಳು ಇತಿಹಾಸದಲ್ಲಿ ಕಾಣ ಸಿಗುತ್ತವೆ. ಗೌತಮ ಬುದ್ಧ ಅವನ ಕಾಲದಲ್ಲಿ ಅಮಾನವೀಯ ಆಚರಣೆ ನಿಲ್ಲಿಸಲು ಪ್ರಯತ್ನಿಸಿದರು. ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಹಿಂಸೆಯ ರುದ್ರನರ್ತನವನ್ನು ಅಹಿಂಸೆಯನ್ನಾಗಿ ಮಹಾವೀರ ಪರಿವರ್ತಿಸಿದರು. ಏಸುಕ್ರಿಸ್ತನು ಬಂದಾಗ ಪರಿತ್ಯಕ್ತರ ಮೇಲೆ ದೌರ್ಜನ್ಯ ನಡೆಯುತ್ತಿದ್ದವು. ಅದನ್ನು ತಡೆಯುವ ಪ್ರಯತ್ನ ಮಾಡಿದ ಏಸು ಜಾಗತಿಕ ಪ್ರೀತಿಯನ್ನು ಹೇಳಿಕೊಟ್ಟರು ಎಂದರು.

ನಿತ್ಯ ಕಲ್ಯಾಣ ಧ್ಯಾನ, ಪೂಜೆ, ಪ್ರಾರ್ಥನೆಗೆ ಸಮಾನ. ಇದಕ್ಕೆ ಸತ್ಪುರುಷರು ಶ್ರಮಿಸಿದ್ದಾರೆ. ಬಸವಣ್ಣ ಚಿಕ್ಕ ವಯಸ್ಸಿನಲ್ಲಿ ಸ್ತೀಪರವಾದ ಧ್ವನಿ ಎತ್ತಿದ. ತನ್ನ ಸಹೋದರಿ ಅಕ್ಕನಾಗಮ್ಮನಿಗೆ ದೀಕ್ಷೆ ಕೊಡಬೇಕೆಂಬ ಧ್ವನಿ ಎತ್ತಿದ. ಇಂದು ಸಭೆ ಸಮಾರಂಭಗಳಲ್ಲಿ ಹೆಣ್ಣು ಮಕ್ಕಳು ಭಾಗವಹಿಸುತ್ತಿದ್ದಾರೆ ಎಂದರೆ ಅದಕ್ಕೆ ಬಸವಣ್ಣ ಕಾರಣ. ನಮ್ಮದು ಜೀವಾಲಯ ಸಂಸ್ಕೃತಿ. ದೇವಾಲಯ ಸಂಸ್ಕೃತಿ ಜಡಸಂಸ್ಕೃತಿಯಾದರೆ ಬಸವಾದಿ ಶರಣರದು ಜೀವಾಲಯ ಸಂಸ್ಕೃತಿ ಎಂದು ಹೇಳಿದರು.

ನಾವು ಸ್ವಾಭಿಮಾನದ ಬದುಕು ನಡೆಸಬೇಕೆಂದು ಅಂಬೇಡ್ಕರ್ ಕರೆಕೊಟ್ಟರು. ಸಾಮಾಜಿಕ ಕ್ಷೇತ್ರದಲ್ಲಿ ಹಿನ್ನಡೆ ಆಗುತ್ತಿರುವುದಕ್ಕೆ ಮುಖ್ಯ ಕಾರಣ ಜಾತಿವಾದ. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಅಪರಾಧ ಎಂದು ಭಾವಿಸಿದ್ದರು. ಇದರ ವಿರುದ್ಧ ಹೋರಾಡಲು ಎಂಟೆದೆ ಬೇಕು. ಇಂದು ಅಸ್ಪೃಶ್ಯತೆ ನಿವಾರಣೆಯಾಗಬೇಕಿದೆ. ಬಸವಣ್ಣನವರ ಚಿಂತನೆಗಳು ಮುರುಘಾಮಠದಲ್ಲಿ ಅನುಷ್ಠಾನಗೊಂಡಿವೆ. ಜಾತಿ ವಾದ ಹೋಗಬೇಕು, ಜಾತ್ಯತೀತ ವಾದ ಉಳಿಯಬೇಕಿದೆ ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಶ್ರೀ ಶಿವಮೂರ್ತಿ ಮುರುಘಾಶರಣರು ಮಾತನಾಡಿದರು. ಬಸವ ರಮಾನಮದ ಸ್ವಾಮೀಜಿ, ಬಸವನಾಗಿದೇವ ಸ್ವಾಮೀಜಿ ಇದ್ದರು.

ಎಲ್ಲೆಡೆ ಬಸವಾದಿ ಶರಣರ ಸಂದೇಶ

12ನೇ ಶತಮಾನದಲ್ಲಿ ನಿತ್ಯವೂ ಅನುಭವಗೋಷ್ಠಿ ನಡೆಯುತ್ತಿತ್ತು. ಕಾಯಕದ ಅನುಭವ. ಕಾಯಕದವರಿಗೆ ಮಾತ್ರ ಅಲ್ಲಿಗೆ ಪ್ರವೇಶವಿತ್ತು. ಹಾಗೆಯೇ 21ನೇ ಶತಮಾನದಲ್ಲಿ ಅದನ್ನು ಜಾರಿಗೆ ತಂದವರು ಮುರುಘಾ ಶರಣರು. ಹೊರರಾಷ್ಟ್ರಗಳಲ್ಲಿಯೂ ಬಸವಾದಿ ಶರಣರ ಸಂದೇಶವನ್ನು ಕೊಟ್ಟವರು ಮುರುಘಾ ಶರಣರು ಎಂದು ಶ್ರೀ ಬಸವಭೂಷಣ ಸ್ವಾಮೀಜಿ ಬಣ್ಣಿಸಿದರು.

ಶ್ರೀ ಬಸವ ರಮಾನಂದ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಸವನಾಗಿದೇವ ಸ್ವಾಮೀಜಿ, ಕೆಎಚ್‌ಬಿ ಸಂಘದ ಅಧ್ಯಕ್ಷ ನರೇಂದ್ರಪ್ಪ, ಕಾರ್ಯದರ್ಶಿ ಮಲ್ಲಿಕಾರ್ಜುನಪ್ಪ, ಡಾ. ವಿಶ್ವನಾಥ್, ಜಿಲ್ಲಾ ಆಯುಷ್ ಅಧಿಕಾರಿಗಳು, ನಿವೃತ್ತ ಡಿವೈಎಸ್ಪಿ ನಾಗರಾಜಪ್ಪ ಭಾಗವಹಿಸಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಉಪ್ಪಾರ ಸಂಘದ ರಾಜ್ಯ ವಕ್ತಾರ ಎಂ.ಪಿ.ಶಂಕರ್ ಸ್ವಾಗತಿಸಿದರು. ನಾಗರಾಜಪ್ಪ ನಿರೂಪಿಸಿದರು.

12/08/2021

We must adopt the desire less feelings in our life. The Nithya Kalyan function too place in the field of Dharani School compound. Dr.Sharanaru blessed to devotees we must involve in the community without any expectations. The society will change through the changes of our thoughts. .



ಏನನ್ನು ಬಯಸದ ಮನೋಸ್ಥಿತಿ ನಮ್ಮದಾಗಬೇಕು

ವಿಕ ಸುದ್ದಿಲೋಕ ಚಿತ್ರದುರ್ಗ

ಎಲ್ಲರೊಳಗೊಂದಾಗು ಎನ್ನುವ ಪ್ರಕ್ರಿಯೆ ಶ್ರೇಷ್ಠವಾದುದು. ಶರಣರಲ್ಲಿದ್ದ ಶ್ರೇಷ್ಠ ಮಾನವತ್ವ ಯಾವ ಸಾಹಿತ್ಯದಲ್ಲೂ ಕಾಣಲು ಸಾಧ್ಯವಿಲ್ಲವೆಂದು ವಿಶ್ರಾಂತ ನ್ಯಾಯಮೂರ್ತಿ ಎಚ್.ಬಿಲ್ಲಪ್ಪ ತಿಳಿಸಿದರು.

ನಗರದ ವಿ.ಪಿ. ಬಡಾವಣೆಯ ಧರಣಿ ಶಾಲೆ ಆವರಣದಲ್ಲಿನಡೆದ ನಿತ್ಯ ಕಲ್ಯಾಣ 4ನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ಏನನ್ನು ಬಯಸದ ಮನೋಸ್ಥಿತಿ ನಮ್ಮದಾಗಬೇಕು. ನಮ್ಮ ಚಿಂತನೆ ಬದಲಿಸುವುದರಿಂದ ಸಮಾಜ ದಲ್ಲಿ ಬದಲಾವಣೆ ತರಲು ಸಾಧ್ಯ. ನಾವು ಗುಣಾತೀತರಾಗಬೇಕು ಎಂದು ಹೇಳಿದರು.

ಸಾನ್ನಿಧ್ಯವಹಿಸಿದ್ದ ಮುರುಘಾಮಠದ ಡಾ.ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು.

ಚಿತ್ರದುರ್ಗದ ವಿ.ಪಿ. ಬಡಾವಣೆಯ ಧರಣಿ ಶಾಲೆ ಆವರಣದಲ್ಲಿ ನಡೆದ ನಿತ್ಯ ಕಲ್ಯಾಣ 4ನೇ ದಿನದ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರು, ವಿಶ್ರಾಂತ ನ್ಯಾಯಮೂರ್ತಿ ಎಚ್.ಬಿಲ್ಲಪ್ಪ ಮತ್ತಿತರರಿದ್ದರು.

ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಿದ್ದರು. ವೀರಶೈವ ಲಿಂಗಾಯತ ಹೇಮರಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಜಿ. ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯ ಕೆ.ವಿ.ರಾಮಕೃಷ್ಣ, ಡಾ.ಎಲ್.ಪಾಲಾಕ್ಷಯ್ಯ, ಜೆ.ಸಿ.ದಯಾನಂದ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ.ಕೆ. ತಾಜ್ ಪೀರ್, ಮೋಕ್ಷ ರುದ್ರ ಸ್ವಾಮಿ, ಗಾಯತ್ರಿ ಶಿವರಾಂ, ಮುರಿಗೆಸ್ವಾಮಿ, ಎ.ವಿಜಯಕುಮಾರ್, ಕೆ.ಎನ್.ವಿಶ್ವನಾಥಯ್ಯ, ಕಾರ್ಯಕ್ರಮ ದಾಸೋಹಿ ಎನ್.ಬಿ.ವಿಶ್ವನಾಥ್ ಇದ್ದರು.

13/08/2021

The traditional peoples spraying the milk on termitarium, It is one of the custom of Shravana festival. The wastage of milk is national waste. So many kids died in India without food, other hand the traditional peoples practices meaningless rituals, So the Dr.Sharanaru during that season distribute the milk fruits, and bread to patients and kids in Basaveshwara Hospital. This is one of the mankind and scientific work than spraying the milk on termitarium is unscientific system. Which means this is one of the vigilance among the publics about the superstitions.



ರೋಗಿಗಳಿಗೆ ಹಾಲು ವಿತರಿಸಿ ಪಂಚಮಿ ಆಚರಿಸಿದ ಶರಣರು

ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಚಿತ್ರದುರ್ಗದ ಡಾ. ಶ್ರೀ ಶಿವಮೂರ್ತಿ ಮುರುಘಾಶರಣರು ಬಸವೇಶ್ವರ ಆಸ್ಪತ್ರೆಯ ರೋಗಿಗಳಿಗೆ ಹಾಲು, ಹಣ್ಣು ವಿತರಿಸುವ ಮೂಲಕ ಶುಕ್ರವಾರ ನಾಗರ ಪಂಚಮಿ ಆಚರಿಸಿದರು. ಶ್ರೀಗಳು ಮಾತನಾಡಿ, ಭಾರತೀಯ ಸಂಪ್ರದಾಯಲ್ಲಿ ನಾಗರ ಕಲ್ಲುಗಳಿಗೆ, ಹುತ್ತಗಳಿಗೆ ಹಾಲು ಎರೆಯುವ ಸಂಪ್ರದಾಯವಿದೆ ಆದರದು ಅವೈಜ್ಞಾನಿಕ ಆಚರಣೆ ಎಂದರು. ಮಠವು ಹಲವು ವರ್ಷಗಳಿಂದ ನಾಗರಪಂಚಮಿಯನ್ನು ಬಸವ ಪಂಚಮಿ ಎಂದು ಆಚರಿಸುತ್ತಿದೆ. ಮಕ್ಕಳಿಗೆ, ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ವಿತರಿಸಿಕೊಂಡುಬರುತ್ತಿದೆ. ಇದು ಹಾಲೆರೆವ ಹಬ್ಬವಲ್ಲ. ಹಾಲುಣಿಸುವ ಹಬ್ಬ ಎಂದು ತಿಳಿಸಿದರು. ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ನಿರ್ದೇಶಕ ಕೆಇಬಿ ಷಣ್ಮುಖಪ್ಪ, ಆಸ್ಪತ್ರೆ ಅಧೀಕ್ಷಕ ಡಾ.ಪಾಲಾಕ್ಷಯ್ಯ, ಡೀನ್ ಡಾ.ಪ್ರಶಾಂತ್ ಮತ್ತಿತರರು ಇದ್ದರು.

ವಿಜಯವಾಣಿ ಚಿತ್ರ

ನಾಗರಪಂಚಮಿ ಅಂಗವಾಗಿ ಚಿತ್ರದುರ್ಗದ ಮುರುಘಾಶರಣರು ಬಸವೇಶ್ವರ ಆಸ್ಪತ್ರೆಯ ರೋಗಿಗಳಿಗೆ ಶುಕ್ರವಾರ ಹಾಲು, ಹಣ್ಣು ವಿತರಿಸಿದರು. ಎಸ್‌ಜೆಎಂ ವಿದ್ಯಾಪೀಠದ ಎ.ಜೆ.ಪರಮಶಿವಯ್ಯ, ನಿರ್ದೇಶಕ ಕೆಇಬಿ ಷಣ್ಮುಖಪ್ಪ ಮತ್ತಿತರರು ಇದ್ದರು.

14/08/2021

At the Seventh day of Nithya Kalyana in Doddasiddvvanahally, Work is worship, the human body like a Nest of deceases without work or Kayaka. Work is part of human life; the body comes for the work. Dr. Sharanaru gave blessings to audience about importance of work.



ಕಾಯಕ ಮಾಡದವರ ಕಾಯ ಕಾಯಿಲೆಗಳ ಗೂಡು

ವಿಶೇಷ ವೈವಾಹಿಕ ಸೇವೆ
ಲಿಂಗಾಯತರಿಗೆ
ನೋಂದಣಿ ಉಚಿತ!
ನಮಗೆ ಕರೆ ಮಾಡಿ 75388 06555

15/8/21

India is a garden of all religions. Dr.Sharanaru blessed to devotees in Neelakanta community hall under the concept of 'Kala Dharma' Which means necessity of time sense.

Majority the peoples running behind the women, wealth, and World. More desires create the difficulties. The way of Basaveshwara is ultimate to the come out from that condition. We must support to secular principles on the basis of Kayaka [work, or Effort].

The Philosophy is a way of Truth and Non-violence, It is provide permanent Peaceful atmosphere to world, and it is contributed by so many Researchers, Scientists, and Philosophers.

The philosophy is support to correction of society mistakes, the constitution has been Philosophy. Helping to another is a feature of noble man.



ಹಲವು ಧರ್ಮಗಳ ಸಂಗಮ ಭಾರತ

'ನಿತ್ಯ ಕಲ್ಯಾಣ' ಕಾರ್ಯಕ್ರಮದಲ್ಲಿ ಶಿವಮೂರ್ತಿ ಮುರುಘಾ ಶರಣರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭಾರತದಲ್ಲಿ ಹಲವು ಧರ್ಮಗಳು ಹುಟ್ಟಿಕೊಂಡಿವೆ. ಹಲವು ಧರ್ಮಗಳು ಇಲ್ಲಿ ಸಂಗಮವಾಗಿವೆ ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಇಲ್ಲಿಯ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ನಡೆದ 'ನಿತ್ಯ ಕಲ್ಯಾಣ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ ಅವರು 'ಕಾಲಧರ್ಮದ ಔಚಿತ್ಯ' ಕುರಿತು ಮಾತನಾಡಿದರು.

'ಸತ್ಯ ಪ್ರತಿಪಾದಿಸುವವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಸತ್ಯದ ಪ್ರತಿಪಾದಕರು ಹಾಗೂ ಸಮಾಜ ಸುಧಾರಕರ ಮೇಲೆ ದೌರ್ಜನ್ಯಗಳು ನಡೆದಿವೆ. ಆದರೂ, ಹಲವು ಧರ್ಮಗಳು ಇಲ್ಲಿ ಉಗಮವಾಗಿವೆ' ಎಂದರು.

'ಬಸವಣ್ಣನವರನ್ನು ಅಧ್ಯಯನ ಮಾಡಿಕೊಂಡ ಅನೇಕರು ನಮ್ಮಲ್ಲಿದ್ದಾರೆ. ಅವರ ವಿಚಾರಗಳ ಬಗ್ಗೆ ಆಲೋಚನೆ ಮಾಡಬೇಕು. ಇಂದಿನ ಯುವ

ಚಿತ್ರದುರ್ಗದ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ನಡೆದ 'ನಿತ್ಯ ಕಲ್ಯಾಣ'ದಲ್ಲಿ ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು. ಮಹಾಂತ ರುದ್ರೇಶ್ವರ ಸ್ವಾಮೀಜಿ, ವಕೀಲರ ಸಂಘದ ಅಧ್ಯಕ್ಷ ಶಿವು ಯಾದವ್, ಎಲ್‌ಬಿ. ರಾಜಶೇಖರ್ ಇದ್ದಾರೆ.

ಸಮೂಹಕ್ಕೆ ವಿಚಾರ, ಧರ್ಮ ಹಾಗೂ ಮೌಲ್ಯದ ಗೀಳು ಹಿಡಿಯಬೇಕಿದೆ' ಎಂದು ಸಲಹೆ ನೀಡಿದರು.

'ಸಮಯಪ್ರಜ್ಞೆ ಮತ್ತು ಕರ್ತವ್ಯ ಪ್ರಜ್ಞೆ ಸೇರಿದಾಗ ಮಾತ್ರ ಯಶಸ್ಸು ನಮ್ಮದಾಗುತ್ತದೆ. ಉತ್ತಮ ನಾಳೆಯನ್ನು ನಿರೀಕ್ಷೆ ಮಾಡುವವರು ಪ್ರಸ್ತುತದಲ್ಲಿ ಬದುಕಬೇಕು. ವರ್ತಮಾನದಲ್ಲಿ ಸಾಹಸ ಮಾಡುವವರ ಜೀವನ ಸುಖಮಯವಾಗಿರುತ್ತದೆ. ಎಲ್ಲರ ಬದುಕಿನಲ್ಲಿ ಪ್ರಗತಿಯ ಚಕ್ರ ತಿರುಗಬೇಕು. ಇದರ ಜೊತೆಯಲ್ಲಿ ಧರ್ಮಚಕ್ರ ಇರಬೇಕು' ಎಂದು ಹೇಳಿದರು.

'ವ್ಯಾಯಾಮ ದೇಹದ ಸಮಸ್ಯೆಗಳನ್ನು ಸರಿಪಡಿಸಿದರೆ, ಚಿಂತನ ಸಮಾಜದ ಸ್ವಾಸ್ಥ್ಯವನ್ನು ಸರಿಪಡಿಸುತ್ತದೆ. ಚಿಂತನೆಗಳನ್ನು ಚಿನ್ನಾಗಿ ಕೇಳಿಸಿಕೊಳ್ಳುವವರಲ್ಲಿ ಆತಂಕ, ಗೊಂದಲ ನಿವಾರಣೆಯಾಗಿ ಸಮತೋಲನ ಸ್ಥಿತಿ ನಿರ್ಮಾಣವಾಗುತ್ತದೆ' ಎಂದರು.

'ಬುದ್ಧಿ, ಶರೀರ, ಇಂದ್ರಿಯಗಳ ನಡುವೆ ಸಮತೋಲನ

ಹಿಂದಿನ ಕಾಲದಲ್ಲಿ ಅನೇಕ ಕಡೆಗಳನ್ನು ಹೇಳುತ್ತ ಜನರಲ್ಲಿ ಭಕ್ತಿ, ಶ್ರದ್ಧೆಯನ್ನು ಬಿತ್ತಲಾಗುತ್ತಿತ್ತು. ಈಗ ಆ ಪರಂಪರೆ ಉಳಿದುಕೊಂಡಿಲ್ಲ. ಸಮಾಜ ಅಂಧಕಾರ ಹೋಗಬೇಕು. ಮಹಾಂತ ರುದ್ರೇಶ್ವರ ಸ್ವಾಮೀಜಿ ಹಬ್ಬಾಳು ರುದ್ರೇಶ್ವರ ಮಠ

ಸೃಷ್ಟಿಯಾಗಬೇಕು. ಧ್ಯಾನವು ಔಷಧವಾಗಿ ಕೆಲಸ ಮಾಡುತ್ತದೆ. ಔಷಧ ತೆಗೆದುಕೊಂಡು ಜೀವಿಸುವುದು ಆರೋಗ್ಯವಲ್ಲ. ಚಿಂತನೆಗಳನ್ನು ಕೇಳುವುದರಿಂದ ಔಷಧ ಇಲ್ಲದೆ ಆರೋಗ್ಯ ಪೂರ್ಣವಾಗಿ ಬದುಕಬಹುದು' ಎಂದು ನುಡಿದರು.

ಭಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ, ವಕೀಲರ ಸಂಘದ ಅಧ್ಯಕ್ಷ ಶಿವು ಯಾದವ್, ಎಲ್.ಬಿ. ರಾಜಶೇಖರ್, ಎಂ.ಟಿ. ಮಲ್ಲಿಕಾರ್ಜುನಸ್ವಾಮಿ, ಎಸ್‌ಜೆವಿಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜಿ. ಪರಮಶಿವಯ್ಯ ಇದ್ದರು.

16/08/2021

Eight day of Nithya Kalyana Dr.Sharanaru gave a blessings to devotees under the concept of What is the Realization? In Prashanth Nagara Ajith Prasad residence. The human being must follow the thoughts instead of publicity. And growing of theoretical thoughts. The Philosophers realize the noble life under the theoretical thoughts. Who gave the ideologies to world. The realization of knowledge is important to human being in modern society.



17/08/21



Chitradurga

Lord Basavanna had defended strongly during 12th century itself the need and importance of doing work by everyone under the concept 'work is worship' so as to build a welfare state, said pontiff Shivamurthy Murugharajendra swamy of Chitradurga Murughamutt here on Sunday. Presiding over the 'Nitya kalyana' a religious event as part of Shravana maasa, arranged in the house of Tazpeer, president of Chitradurga congress committee, the pontiff said that there should be more working people to produce more wealth by joining more people together to construct the welfare state (Kalyana State).

Every citizen should have a duty conscious and there should be mass production to achieve the welfare state, the pontiff observed. Lord Basavanna was adopted distribution of wealth or food under the concept 'dasoha'. Likewise, in Islam religion also muslims donate things to poor under the concept 'Jakata', the pontiff noted. The culture of 'work is worship' is seen in both Hindu and Muslim regions, the pontiff said. Muslim guru Anwar Asad, Rev Father M.A.Raju along with several Hindu and Muslim people were present.

17/08/2021

The Nithya Kalyana Function took place in Sri. Anwar Pasha. Dr Sharanaru gave blesses to devotees about equal balance is best way for the maintenance of variations. Social equality is support to control of prejudices of our life. The nature created the human being, but man created the castes. Broad sense and study giving a happy. Concentration is available when you coming from the angry & worries.



ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ ದಾವಣಗೆರೆ/ಚಿತ್ರದುರ್ಗ ಲೋಕಲ್

ಶ್ರೀ ಮುರುಘಾ ಶರಣರ ಹೇಳಿಕೆ | ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ

ಏರಿಳಿತಗಳ ನಿರ್ವಹಣೆಗೆ ಸಮಸ್ಥಿತಿ ಅಗತ್ಯ

ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಜೀವನದಲ್ಲಿ ಎದುರಾಗುವ ಏರಿಳಿತಗಳನ್ನು ಕ್ಷಾಬಲ್ ಕರಲು ಸಮತೋಲನ ಸ್ಥಿತಿ ಕಾಯ್ದುಕೊಳ್ಳುವುದು ಅಗತ್ಯ ಎಂದು ಚಿತ್ರದುರ್ಗ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಬಡಾಮಕಾನ್ ಬಳಿಯ ಅನ್ವರ್ ಪಾಷ ಅವರ ನಿವಾಸದಲ್ಲಿ ಮಂಗಳವಾರ ರಾತ್ರಿ ಆಯೋಜಿಸಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸಮತೋಲನ: ಅದರ ಸಾಧನೆ ಮತ್ತು ಪ್ರಯೋಜನ ಕುರಿತು ಮಾತನಾಡಿದರು.

ಮುರುಘಾ ಶರಣರು

ಸಮಸ್ಥಿತಿ ಸಾಧಿಸಿದವರ ಜೀವನ ಹದುಳವಾಗುತ್ತದೆ ಇಲ್ಲದಿದ್ದರೆ ಉದ್ವೇಗ, ಆತಂಕಕ್ಕೆ ಒಳಗಾಗಬೇಕಾಗುತ್ತದೆ. ಆಧುನಿಕ ಜೀವನ ತಲ್ಲಣಗಳಿಂದ ಕೂಡಿದ್ದು ಶಾರೀರಿಕ, ಆಂತರಿಕ, ಸಾಮಾಜಿಕ ಸಮತೋಲನಗಳನ್ನು ಕಾಪಾಡಿಕೊಳ್ಳುವ ಮೂಲಕ ಈ ತಲ್ಲಣಗಳನ್ನು ಎದುರಿಸಬೇಕಿದೆ ಎಂದರು. ನಿಸರ್ಗ ಮಾನವನನ್ನು ಸೃಷ್ಟಿಸಿದರೆ, ಮಾನವ ಜಾತಿಗಳನ್ನು ಸಿರ್ಮಿಸಿದನು. ವಿಶಾಲ ಹೃದಯ ಹಾಗೂ ಅಧ್ಯಯನದಿಂದ ಆನಂದ ಸಿಗುತ್ತದೆ. ಕೋಪ, ತಾಪಗಳಿಂದ ಹೊರ ಬಂದು ಏಕಾಗ್ರತೆ ಗಳಿಸಲು ಸಾಧ್ಯವಿದೆ ಎಂದು ತಿಳಿಸಿದರು.

ರಾಣೇಬೆನ್ನೂರು ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಮಾತನಾಡಿ, ಎಲ್ಲರಿಗೂ ಸೂರ್ಯ, ಗಾಳಿ, ನೀರು ಒಂದೇ. ಆದ್ದರಿಂದ ನಾವೆಲ್ಲರೂ ಒಂದೇ ಎಂಬ ಭಾವನೆ ನಮ್ಮದಾಗಿರಬೇಕು. ಸಮಾಜದಲ್ಲಿ ಸಮಾನತೆ ತರುವಂತಹ ಕೆಲಸವನ್ನು ಮುರುಘಾ ಶರಣರು ಮಾಡುತ್ತಿದ್ದಾರೆ ಎಂದರು.

ಡಿವೈಜಿ ಡಾ. ಅರ್ ರಂಗನಾಥ್, ದಾನೋಕಿ ಅನ್ವರ್‌ಪಾಷಾ, ಶ್ರೀ ಬಸವ ನಾಗಿದೇವ ಸ್ವಾಮೀಜಿ, ಡಿಸಿಸಿ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಸೈಯದ್ ಖಾನಾಕ್ .ಡಿ.ಡಿ.ಬಾಬು, ನಗರಸಭೆ ಸದಸ್ಯ ನಸ್ರುಲ್ಲಾ, ಅಬ್ದುಲ್ ರೆಹಮಾನ್ ಮತ್ತಿತರರು ಇದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ವಿಶ್ವನಾಥ್ ಸ್ವಾಗತಿಸಿ, ಉಷಾಕಿರಣ್ ಮತ್ತು ನಿರಂಜನ ದೇವರಮನೆ ನಿರೂಪಿಸಿದರು.

21/082021

Dr. Sharanaru delivered the blessings to devotees under the concept of Happiness available from the Reality, in Sadashivanagara of Shankarachar Nivasa. We must construction a good lie structure through the faraway from the nonrealistic and travel to realistic. Realistic which means reality, truth. Those who are living in the base of reality they are received the status and insult in equal. Unrealistic person's artificial acting in society. The realistic life gave a permanent happiness to human being.



ವಾಸ್ತವದಿಂದ ಸತ್ಯದರ್ಶನ

ಮುರುಘಾ ಶ್ರೀ ಹೇಳಿಕೆ | ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ ಉತ್ಸವ

ಪುರಾಣ ಕಥೆಗಳಿಗೆ ಬರ

ಯಾವುದು ಸಮೃದ್ಧಿ

ಅಂದು ಏಕಾಗ್ರತೆಯ ಪುಕ್ಕಾರಾಧನೆ

22/08/2021

The Nithya Kalyana function took place in BVKS Layout Residence of Sresh Babu. Dr.Sharanaru delivered blessings to devotees, under the concept of Unfolding of Personality. Sculpture cutting the stone for the Statue, like noble thoughts, friendship of good persons, and support to good personalities. The Saints guidelines support to good personality. The shadow follow the person like the personality is also follow the individual. Ignorance, temptation is support to bull behavior. The Moon lightening when the Sun is absent, When the Moon is absent then the Stars are shining. The Temptation is causes for the internal darkness.



ಪ್ರಲೋಭನೆಯೇ ಅಂತರಂಗದ ಕತ್ತಲೆಗೆ ಮೂಲ ಕಾರಣ

24-8-21

ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಕಲ್ಲನ್ನು ಕಟೆದು ಸುಂದರ ಮೂರ್ತಿ ಮಾಡುವಂತೆ ಸದ್ವಿಚಾರ, ಸಜ್ಜನರ ಸಂಗದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಅವರವರ ವ್ಯಕ್ತಿತ್ವದ ಶಿಲ್ಪಿಗಳು ಅವರವರೇ ಆಗಬೇಕು ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಬಿವಿಕೆಎನ್ ಲೇಔಟ್‌ನ ಸುರೇಶ್‌ಬಾಬು ನಿವಾಸದಲ್ಲಿ ಭಾನುವಾರ ಆಯೋಜಿಸಿದ್ದ ನಿತ್ಯಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ವ್ಯಕ್ತಿತ್ವ ಅನಾವರಣಗೊಳಿಸುವ ಬಗೆ ಯಾವುದು ಕುರಿತು ಮಾತನಾಡಿದರು.

ವ್ಯಕ್ತಿತ್ವ ರೂಪಿಸಿಕೊಳ್ಳಲು ಗುರುಗಳ ಮಾರ್ಗದರ್ಶನ ಒಂದಷ್ಟು ಪ್ರೇರಣೆ ನೀಡುತ್ತದೆ. ನೆರಳು ಶರೀರವನ್ನು ಹಿಂಬಾಲಿಸುವಂತೆ ವ್ಯಕ್ತಿತ್ವ ವ್ಯಕ್ತಿಯನ್ನು ಹಿಂಬಾಲಿಸುತ್ತದೆ. ಪ್ರಲೋಭನೆ, ವಿಷಯಾಸಕ್ತಿ, ಅಜ್ಞಾನಗಳಿಂದ ಅಂತರ್ಯದಲ್ಲಿ ಕತ್ತಲೆ ಆವರಿಸುತ್ತದೆ. ಇದರರ್ಥ ನಮ್ಮ ನಿಮ್ಮ ಶತ್ರುಗಳು ನಮ್ಮೊಳಗೇ ಇವೆ. ಅಂತರಂಗದ ಕಳ್ಳಕಾಕರು ನಮ್ಮ ಅಂತಃಸತ್ವ ಬೋಚುತ್ತಾರೆ ಹೀಗಾಗಿ ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿದರು.

ಸೂರ್ಯನಿಲ್ಲದ ವೇಳೆ ಚಂದ್ರ, ಚಂದ್ರನಿಲ್ಲದಾಗ ನಕ್ಷತ್ರಗಳು ಬೆಳಗುತ್ತವೆ. ಹಾಗೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಜ್ಞಾನೋದಯವಾದರೆ ನಮ್ಮ ಹೃದಯ ಅರಳುತ್ತದೆ ಎಂದರು.

ನಿವೃತ್ತ ಇಂಜಿನಿಯರ್ ಚಂದ್ರಶೇಖರಯ್ಯ ಮಾತನಾಡಿ ಸಜ್ಜನರ ಸತ್ಸಂಗ ಮಾಡಬೇಕು ಎಂದರು. ರತ್ನಮ್ಮ ಇದ್ದರು. ಕಾರ್ಯಕ್ರಮದ ದಾನಿಗಳಾದ ಸುರೇಶ್‌ಬಾಬು, ಎನ್.ಟಿ.ಲಿಂಗರಾಜು ಇದ್ದರು.

ಗುರುಗಳ ಮಾರ್ಗದರ್ಶನದಿಂದ ಪ್ರೇರಣೆ

ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡವರನ್ನು ಸಮಾಜ ಗೌರವಿಸುತ್ತದೆ. ಸರಳತೆ, ಸದ್ಗುಣಗಳನ್ನು ಆಳವಡಿಸಿಕೊಂಡು ಸಂಸ್ಕಾರವಂತರಾಗಬೇಕು.

ಶ್ರೀ ಶಿವಬಸವ ಸ್ವಾಮೀಜಿ
ಅಧ್ಯಕ್ಷ ಗಚ್ಚಿನಮಠ

23/08/2021

III. YOUTHS AND HIS CONTRIBUTIONS

The youths suffered from opportunities from lack of vigilance & quickness. The external attractions changes of the way of study. It is obstacle to youths future. Dr.Sharanaru said the introduction of achievements is support to development of youths future. Now-a-days the youths behind the achievements. We must consolidation of power, knowledge, & devotion among the youths.



ಭವಿಷ್ಯಕ್ಕೆ ಮಾರಕ ಬಾಹ್ಯ ಸೆಳೆತ

25-8-21

ಯುವಜನರಿಗೆ ಮುರುಘಾಶರಣರ ಕಿವಿಮಾತು | ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ

ವಿಜಯವಾಣಿ ಚಿತ್ರದುರ್ಗ

ಜ್ಞಾನಿಯ ಸೊಡಕೆ ಮತ್ತು ಚಲನಶೀಲತೆ ಅರಿವಿಲ್ಲದೆ ಯುವ ಜನರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಡಾ.ಶಿವ ಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸೋಮವಾರ ರಾತ್ರಿ ಆಯೋಜಿಸಿದ್ದ 15 ನೇ ದಿನದ ನಿತ್ಯಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಯುವಜನತೆ ಮತ್ತವರ ಕೊಡುಗೆಗಳೇನು? ವಿಷಯದ ಕುರಿತು ಮಾತನಾಡಿದರು.

ಬಹಿರಂಗದ ಸೆಳೆತಗಳು ಅವರ ಅಧ್ಯಯನದ ದಿಕ್ಕನ್ನೇ ಬದಲಿಸುತ್ತವೆ. ಬಾಹ್ಯ ಸೆಳೆತಗಳಿಗೆ ಒಳಗಾದರೆ ಉಜ್ವಲ ಭವಿಷ್ಯ ವಿದಮ. ಸಾಧನೆಗಳ ಪರಿಚಯ ಆದರೆ ಅನ್ಯರಿಗೆ ಸ್ಫೂರ್ತಿಯಿಂದ ಯುವಜನರು ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿದೆ. ಆದರೆ ಇಂದು ಯುವ ಶಕ್ತಿ ತೀವ್ರವಾಗುತ್ತಿದ್ದು, ಸಾಧನೆಗಳಿಂದ ಹಿಮ್ಮುಖವಾಗುತ್ತಿದೆ. ಆವರಲ್ಲಿ ಶಕ್ತಿ, ಯುಕ್ತಿ, ಭಕ್ತಿಯ ತ್ರಿವೇಣಿ ಸಂಗಮವಾಗಬೇಕಿದೆ ಎಂದರು.

ಮೊಬೈಲ್ ಯಾವುದಾದರೂ ಜೀವ ಉಳಿಸಲು ನೆರವಾಗುವಂತಿದ್ದರೆ ಉತ್ತಮ. ಆದರ ಅತಿಯಾದ ಬಳಕೆಯಿಂದ ಹದಿಹರೆಯದವರು ಬಾಹ್ಯ ಸೆಳೆತಕ್ಕೆ ಸಿಲುಕುತ್ತಿದ್ದಾರೆ. ಯುವ ಜನರು ಸ್ವಾವಲಂಬಿಗಳಾಗಬೇಕು. ಪಾಲಕರು ತಮ್ಮ ಮಾರ್ಗದಲ್ಲಿ ಆಸ್ತಿ ಮಾಡಿ ಮಕ್ಕಳನ್ನು ದಾರಿ ತಪ್ಪಿಸಬಾರದು ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ದೊಡ್ಡಮೇಟಿಕುರ್ಕಿ ವಿರಕ್ತಮಠದ ಶ್ರೀ ಪಟೇಶ್ವರ ಸಿದ್ಧಬಸವ ಸ್ವಾಮೀಜಿ ಮಾತನಾಡಿ, ಇಂದಿನ ಯುವಕರೇ ದೇಶದ ಆಸ್ತಿ. ಸ್ವಾಮಿ ವಿವೇಕಾನಂದರು ಯುವಜಾತಿಗೆ ಹೆಚ್ಚಿನ ಮಹತ್ವ ನೀಡಿದ್ದರು. ಇವತ್ತಿ ದೇಶ ಕಾಯುವವರಾಗಬೇಕು. ದೇಶವನ್ನು ಭ್ರಷ್ಟಾಚಾರಕ್ಕೆ ತೊಡಿಯುವ ಕೆಲಸವನ್ನು ಯುವಜನರು ಮಾಡಬೇಕು ಎಂದರು.

ರೋಟರಿ ಕ್ಲಬ್ ಪ್ರಮುಖರಾದ ರಾಜೇಶ್ವರಿ ಸಿದ್ಧರಾಮ್, ಅರುಣ್ ಕುಮಾರ್, ಎನ್‌ಜೆಂ ವಿದ್ಯಾಸಿಲಾಸ ಕಾರ್ಯದರ್ಶಿ ಎ.ಚ.ಪರಮೇಶಮ್ಮ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹಂಪೇಗೌ, ಸಿ.ಶಂಕರಮೂರ್ತಿ, ವಿಶ್ವನಾಥ್, ವೀರೇಶ್, ನಾಗವಾಣಿ ಸಂಗಮ್, ಎನ್. ಬೆಲುದಂಡಜ್ಜು ಗಾಯತ್ರಿ ಶಿವರಾಂ ಮತ್ತಿತರರು ಇದ್ದರು.

ಚಿತ್ರದುರ್ಗದ ರೋಟರಿ ಬಾಲಭವನದಲ್ಲಿ ಆಯೋಜಿಸಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಡಾ.ಶ್ರೀ ಶಿವಮೂರ್ತಿ ಶರಣರು ಮಾತನಾಡಿದರು. ಶತಿಷೇಖರ ಸಿದ್ಧಬಸವ ಶ್ರೀ ರಾಜೇಶ್ವರಿ ಅರುಣ್‌ಕುಮಾರ್, ಎನ್.ಜೆಲುಪರಾಜು ಗಾಯತ್ರಿ ಶಿವರಾಂ ಮತ್ತಿತರರಿದ್ದರು.

26/08/2021

'Concentration and its Advantages'- Dr. Sharanaru Said, the concentration is bedrock to concrete life. The human being must find out accurate reasons to unsystems. Concentration in work.



ಬದುಕಿನ ಮೂರ್ತ ಸ್ವರೂಪಕ್ಕೆ ಏಕಾಗ್ರತೆ ಅತ್ಯಗತ್ಯ

ಚಿತ್ರದುರ್ಗ: ಬದುಕಿಗೆ ಮೂರ್ತ ಸ್ವರೂಪ ಕೊಡಬೇಕಾದರೆ ಏಕಾಗ್ರತೆ ಅತ್ಯಗತ್ಯ ಎಂದು ಡಾ। ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಜೋಗಿಮಟ್ಟಿ ರಸ್ತೆಯ 5ನೇ ಕ್ರಾಸ್‌ನಲ್ಲಿ ಎ.ವೇಣುಗೋಪಾಲ್ ನಿವಾಸದ ಬಳಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾಯವಿಕಾರ, ಮನೋವಿಕಾರದಲ್ಲಿ, ಮಾನವ ಸದ್ವಿಚಾರವನ್ನೇ ಮರೆಯುತ್ತಿದ್ದಾನೆ. ಕಾಯವಿಕಾರ ಮನೋವಿಕಾರದಲ್ಲಿ ಮಾನವ ಸದ್ವಿಚಾರವನ್ನೇ ಮರೆಯುತ್ತಿದ್ದಾನೆ. ನಿತ್ಯ ಕಲ್ಯಾಣ ಬದುಕಿನಲ್ಲಿ ಅನಾವರಣ ಆಗಬೇಕು. ಅದಕ್ಕಾಗಿ ಪ್ರಯತ್ನ ನಡೆಯಬೇಕು. ಮಾನವ ಸಹಜವಾದ ಅಸ್ವಸ್ಥತೆಗೆ ಕಾರಣ ಕಂಡುಕೊಳ್ಳಬೇಕಿದೆ. ಮನಸ್ಸು ಚಂಚಲಗೊಳ್ಳಬಾರದು. ನಾವು ಮಾಡುವ ಕೆಲಸ ಯಾವುದೇ ಇರಲಿ ಅಲ್ಲಿ ಏಕಾಗ್ರತೆ ಇರಬೇಕು. ಜೀವನದಲ್ಲಿ ಏಕಾಗ್ರತೆಗೆ ಕೊರತೆಯಾಗಬಾರದು. ಏಕಾಗ್ರತೆಯಲ್ಲಿ ಶಕ್ತಿ ಇದೆ. ಅದಿಲ್ಲದಿದ್ದರೆ ಅನೇಕ ಅವಘಡಗಳು ನಡೆಯುತ್ತವೆ. ಒಳ್ಳೆಯ ಕೇಳುಗ ಉತ್ತಮ ಭಾಷಣಕಾರರಾಗುತ್ತಾನೆ ಎಂದು ವಿಶ್ಲೇಷಿಸಿದರು.

ಮನಸ್ಸಿನೊಳಗೆ ಬರುವ ಕೆಟ್ಟ ಆಲೋಚನೆಗಳನ್ನು ಹೊರಹೊಡಿಸಬೇಕು. ಮನಸ್ಸನ್ನು ಸೋಡುವುದಕ್ಕಿಂತ ಆಲೋಚನೆಗಳನ್ನು ಸರಿ ಮಾಡಿಕೊಳ್ಳಬೇಕು. ಏಕಾಗ್ರತೆ ಹಾಗೂ ದೃಢತೆಯಿಂದ ಯಶಸ್ಸು ಬರುತ್ತದೆ. ಶಿಸ್ತು, ಸಂಯಮ ಮತ್ತು ಆಚ್ಚುಕ್ಟುತನ ನಮಗೆ ಬೇಕಾಗುತ್ತದೆ ಎಂದರು.

ಶಿರಸಂಗಿ ಮುರುಘಾಮಠದ ಶ್ರೀ ಬಸವ ಮಹಾಂತ ಸ್ವಾಮಿಗಳು ಮಾತನಾಡಿ, ಮನಸ್ಸನ್ನು ಒಂದೇ ವಿಷಯದ ಮೇಲೆ ಕೇಂದ್ರೀಕರಿಸುವುದೇ ಏಕಾಗ್ರತೆ. ಪ್ರತಿಯೊಬ್ಬರಲ್ಲೂ ಏಕಾಗ್ರತೆ ಗುಣ ಬರಬೇಕು. ಮನುಷ್ಯನಿಗೆ ಯಶಸ್ಸು ಸಿಗುವುದು ಏಕಾಗ್ರತೆಯಿಂದ ಸಮಸ್ಯೆಗಳಿಗೆ ಪರಿಹಾರವೆಂದರೆ ಏಕಾಗ್ರತೆ ಎಂದು ತಿಳಿಸಿದರು.

ಚಿತ್ರದುರ್ಗ ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆ ಅಧ್ಯಕ್ಷ ಮಹೇಂದ್ರನಾಥ್ ಮಾತನಾಡಿದರು. ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿದ್ದ ಎ. ವೇಣುಗೋಪಾಲ್ ವೇದಿಕೆಯಲ್ಲಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಶ್ರೀಧರ್ ಸ್ವಾಗತಿಸಿದರು. ಜಯದೇವ್ ನಿರೂಪಿಸಿದರು.

ಚಿತ್ರದುರ್ಗ: ನಗರದ ಜೋಗಿಮಟ್ಟಿ ರಸ್ತೆಯ ಬಳಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಡಾ। ಶ್ರೀ ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು.

27/08/2021

Dr.Sharanaru delivered the blessings to devotees on the content 'Is it possible Superstition less Society'. Now-a-days we are observing of self-esteem society. It is result of Bhudda, Basavanna, Gandhi, Ambedkar's Sacrificeness. The program took place in the residence of Sri H.C. Niranjanamurthy as ex-chairperson of Municipality.

Basavanna identified among the exploited society not among the Capitalists. The poverty is continue in country, The free hungriness society existed based on Kayaka. We must believe in Religion but not in superstition, Devadasi System Shameful System in society. Former S.P. said we must moving in the direction of Dr.Sharanaru.



ನಿತ್ಯ ಕಲ್ಯಾಣ ಡಾ.ಶಿವಮೂರ್ತಿ ಮುರುಘಾ ಶರಣರ ಹೇಳಿಕೆ

ಬಸವಣ್ಣನ ಹಾದಿಯಲ್ಲಿ ಸಾಗಿ ವಿಶ್ವಮಾನ್ಯರಾಗೋಣ

• ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ಬಸವಣ್ಣನವರು ಅಲಕ್ಷಿತ, ನಿರ್ಲಕ್ಷಿತ, ತುಳಿತಕ್ಕೊಳಗಾದ ನಿಮ್ನ ವರ್ಗದವರ ಜೊತೆ ಗುರುತಿಸಿಕೊಂಡಿದ್ದರಿಂದ ವಿಶ್ವಮಾನ್ಯರಾದರು ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಹೊಳಲ್ಕೆರೆ ರಸ್ತೆಯ ನಗರಸಭೆ ಮಾಜಿ ಅಧ್ಯಕ್ಷ ಎಚ್.ಸಿ.ನಿರಂಜನಮೂರ್ತಿ ಅವರ ನಿವಾಸದಲ್ಲಿ ಆಯೋಜಿಸಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ 'ಮೌಢ್ಯಮುಕ್ತ ಸಮಾಜ ಕ್ರಿಯಾಶೀಲವೇ' ? ವಿಷಯ ಕುರಿತು ಮಾತನಾಡಿ, ಗೌತಮ ಬುದ್ಧನಿಂದ ಹಿಡಿದು ಬಾಬಾಸಾಹೇಬ ಅಂಬೇಡ್ಕರ್‌ರವರೆಗೆ ಎಲ್ಲರೂ ಅಕ್ಷರ ಸಮಾಜ, ಶಿಕ್ಷಣ ಪ್ರಧಾನ ಸಮಾಜ, ಪ್ರಜ್ಞಾವಂತ ಸಮಾಜ ರಚನೆಯಾಗಬೇಕೆಂದು ಪ್ರಯತ್ನಪಟ್ಟರು. ಅದರ ಫಲವಾಗಿ ನಾವಿಂದು ಸ್ವಾಭಿಮಾನಪೂರ್ಣ ಸಮಾಜವನ್ನು ಕಾಣಲು ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಬಸವಣ್ಣನವರು ನಿಮ್ನವರ್ಗದವರ ಜೊತೆ ಗುರುತಿಸಿಕೊಂಡಿದ್ದರಿಂದ ಅವರು ವಿಶ್ವಮಾನ್ಯರಾದರು. ಅವರು ಬಂಡವಾಳಶಾಹಿಗಳ ಜೊತೆ ಗುರುತಿಸಿಕೊಳ್ಳಲಿಲ್ಲ. ಸಮಾಜದಲ್ಲಿ ಯಾರೂ ಸಹ ಅನ್ನವಿಲ್ಲದೆ ಜೀವಿಸುವ ಸಂದರ್ಭ ಬರಬಾರದು. ದೇಶದಲ್ಲಿ ಬಡತನ ಇನ್ನೂ ಇದೆ. ಹಾಗಾಗಿ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೆ ತಂದಿದೆ. ಹಸಿವು ಮುಕ್ತ ಸಮಾಜ ಸುಮ್ಮನೆ ನಿರ್ಮಾಣವಾಗುವುದಿಲ್ಲ. ಹೊಟ್ಟೆ ತುಂಬಬೇಕಾದರೆ ರಟ್ಟಿಗೆ ಕೆಲಸ ಕೊಡಬೇಕು ಎಂದರು.

ನಿಸರ್ಗ ಮಾನವನನ್ನು ಸೃಷ್ಟಿಸಿದರೆ ಮಾನವ ದೇವರುಗಳನ್ನು ಸೃಷ್ಟಿಸಿದ್ದಾನೆ. ಅಂಗೈಯಲ್ಲಿನ ರೇಖೆಯಿಂದ ಧನ ಬರುವುದಿಲ್ಲ, ಹಣ ಬರಬೇಕಾದರೆ ದುಡಿಮೆಯ ರೇಖೆ, ಕಾಯಕದ ರೇಖೆ ಬರಬೇಕು. ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಬೇಕಾದರೆ ರಟ್ಟಿಗೆ ಕಾಯಕ ಕೊಡಬೇಕು. ಅದು ಕಾಯಕದ ಚಳುವಳಿಯಾಗಬೇಕು ಎಂದು ತಿಳಿಸಿದರು.

ಕಾಯಕ ಮಾಡಿದರೆ ಹಣ ತಾನಾಗಿಯೇ ಬರುತ್ತದೆ. ಹಸಿವು ನಿವಾರಣೆಯಾಗಬೇಕಾದರೆ ಕಾಯಕ ಮಾಡಬೇಕು. ಭಾರತಕ್ಕೆ ನೂರು ಮಂತ್ರಗಳಿಗಿಂತ ಕಾಯಕವೇ ಕೈಲಾಸ ಎಂಬ ನುಡಿಯ ಅವಶ್ಯಕತೆ ಇದೆ. ಜೀವನದಲ್ಲಿ ಅಂಧಶ್ರದ್ಧೆ, ಮೂಢನಂಬಿಕೆಗಳು, ಕಂದಾಚಾರಗಳು ಇರಬಾರದು. ಬದುಕಿನಲ್ಲಿ ನಂಬಿಕೆ ಇರಬೇಕು, ಅವನಂಬಿಕೆಯು ಅವೈಜ್ಞಾನಿಕವಾದುದು. ಧರ್ಮದ ಮೇಲೆ ನಂಬಿಕೆಯಿರಲಿ ಮೂಢನಂಬಿಕೆ ಬೇಡ ಎಂದು ತಿಳಿಸಿದರು.

ಮೂಢನಂಬಿಕೆ ಹೆಸರಲ್ಲಿ ವಾಮಾಚಾರ ಜೀವಂತವಾಗಿದೆ. ಯಾರೋ ಮತ್ಯಾರನ್ನೋ ತುಳಿಯಲು ಸಾಧ್ಯವಿಲ್ಲ. ಮೌಢ್ಯಗಳನ್ನು ವಿರೋಧಿಸಲು ಧೈರ್ಯಬೇಕು. ಜಾನಾಮತಿ ಇದೆ. ಇದು ಕೂಡ ಆರೋಗ್ಯ ಸಮಾಜಕ್ಕೆ ಕಂಟಕ ಎಂದರು. ದೇವರ ಹೆಸರಿನಲ್ಲಿ ಅಮಾನವೀಯ ಆಚರಣೆಗಳನ್ನು ಮಾಡುತ್ತಿದ್ದಾರೆ. ಇಂಥವುಗಳನ್ನು ನಿಲ್ಲಿಸಬೇಕು. ದೇವದಾಸಿ ಪದ್ಧತಿಯು ಸಹ ಅವೈಜ್ಞಾನಿಕ ವಾದುದು. ಅಘೋರ ಇದೊಂದು ರೀತಿಯ ಮಾಟಗಾರಿಕೆ. ಊಟದ ತಟ್ಟೆಯಲ್ಲಿ ಮಾಟ ಮಾಡುವುದು. ಇವು ಅನಾಗರೀಕವಾದ ಆಚರಣೆಗಳಾಗಿವೆ ಎಂದು ಹೇಳಿದರು.

ನಿವೃತ್ತ ಎಸ್ಪಿ ರುದ್ರಮುನಿ ಮಾತನಾಡಿ, ಇದೊಂದು ಕಲ್ಯಾಣ ಕ್ರಾಂತಿ. ನಾವು ಶರಣರ ಹಾದಿಯನ್ನು ಬಿಟ್ಟು ಸ್ವಾರ್ಥದ ಹಾದಿಯಲ್ಲಿ ಸಾಗುತ್ತಿದ್ದೇವೆ. ಸ್ವಾರ್ಥ ನಮ್ಮನ್ನು ಸುಡುತ್ತದೆ. ಹಾಗಾಗಿ ಶರಣರ ಚಿಂತನೆಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕುಂಚಾರ ಗುಂಡಯ್ಯ ಗುರುಪೀಠದ ಶ್ರೀಗಳು ಸಮ್ಮುಖ ವಹಿಸಿದ್ದರು. ದೇವೇಂದ್ರಪ್ಪ ದಾವಣಗೆರೆ, ಎನ್.ಟಿ. ಲಿಂಗರಾಜು ಉಪಸ್ಥಿತರಿದ್ದರು.

ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿ ಆಯೋಜಿಸಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು.

28/08/2021

Welfare and its Concept? The Nithya Kalyana function took place in the residence of M.K.Tajpee Chairperson of District Congress Committee. Dr.Sharanaru Said the Sharanaru find out the way for the production such is Kayaka or Work. Without production Kalyana never unfold. During 12the century Sharanas group assembled under the Basavanna thoughts, caste, religion, country, the Marulasidda Shankaradevarau among the one, He came from Afghanistan. Where more earning there is is more contributors. The Islam Guru said all religious statements belong to life of harmony.



ಡಾ.ಶ್ರೀ ಶಿವಮೂರ್ತಿ ಮುರುಘಾ ಶರಣರ ಅಭಿಮತ | ಚಿತ್ರದುರ್ಗದಲ್ಲಿ ನಿತ್ಯ ಕಲ್ಯಾಣ ಕಾರ್ಯಕ್ರಮ

ಉತ್ಪಾದನೆಗೆ ಶರಣರು ಕಂಡುಕೊಂಡ ದಾರಿ ಕಾಯಕ

29/08/2021

The Nithya Kalyana function arranged in the residence of Mahesh Chakrapali of SalaBommanahalli. Dr.Sharanaru blessed the devotees on the concept of 'Health & Its way of Maintenance'. Dr.Sharanaru told to devotees Medicine less life is peaceful life to human being. Initially the human being running behind the money, but now running with health. Life style, food system, positive thoughts is support to health life.



ಔಷಧ ರಹಿತ ಬದುಕು ಮಾನವನ ನೆಮ್ಮದಿಗೆ ಸಹಕಾರಿ

ಚಿತ್ರದುರ್ಗ: ಔಷಧ ರಹಿತ ಜೀವನ ನಡೆಸುವವರೇ ಭಾಗ್ಯವಂತರು ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ತಾಲೂಕಿನ ಸಲಬೊಮ್ಮನಹಳ್ಳಿಯ ಮಹೇಶ್ ಚಕ್ರಸಾಲಿ ಅವರ ನಿವಾಸದಲ್ಲಿ ಭಾನುವಾರ ರಾತ್ರಿ ಹಮ್ಮಿಕೊಂಡಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಆರೋಗ್ಯ; ಅದನ್ನು ಕಾಪಾಡಿಕೊಳ್ಳುವ ಹಾದಿಗಳ? ಕುರಿತು ಮಾತನಾಡಿದರು.

ಆರೋಗ್ಯ ಕಾಪಾಡಿಕೊಳ್ಳಲು ಸದಾ ಗಮನಹರಿಸಬೇಕು. ಔಷಧ ರಹಿತ ಜೀವನ ನಿರ್ವಹಣೆಗೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

ಮೊದಲು ಜನ ಹಣದ ಜತೆ ಸಾಗುತ್ತಿದ್ದರು. ಈಗ ಆರೋಗ್ಯದ ಹಿಂದೆ ಓಡುತ್ತಿದ್ದಾರೆ. ಆನಾರೋಗ್ಯಕ್ಕೆ' ತುತ್ತಾಗದಂತೆ ಎಚ್ಚರವಹಿಸಬೇಕು. ಸಾತ್ವಿಕ ಆಹಾರ, ಜೀವನ ವಿಧಾನ, ಯೋಜನಾ ಕ್ರಮ, ಸಕಾರಾತ್ಮಕ ಚಿಂತನೆಗಳ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಕೋವಿಡ್ ನಮಗೆ ಅನೇಕ ಪಾಠ ಕಲಿಸಿದೆ. ಹಣಕ್ಕಿಂತ ಆರೋಗ್ಯ ಮುಖ್ಯ ಎಂಬುದು ಜನರಿಗಾಗಿದೆ. ಹಣ ಶಾಶ್ವತವಲ್ಲ. ಅದು ಒಂದು ದಿನ ದುಃಖ ತಂದುಕೊಡುತ್ತದೆ ಎಂದು

> ಆರೋಗ್ಯ ಕೆಡದಂತೆ ನೋಡಿಕೊಳ್ಳಬೇಕು. ಹಿಂದೆಲ್ಲ ಪ್ಲೇಗ್ ಪ್ಲೊದಲಾದ ಸಾಂಕ್ರಮಿಕ ರೋಗಗಳಿದ್ದವು. ಆದರೆ, ಇಂದು ಅಸಾಂಕ್ರಾಮಿಕ, ಹೃದಯ ಸಂಬಂಧಿ ಕಾಯಿಲೆಗಳು ಜಾಸ್ತಿಯಾಗುತ್ತಿವೆ. ಇದಕ್ಕೆಲ್ಲ ಕಾರಣ ಬದಲಾದ ಜೀವನಶೈಲಿ, ಆಹಾರ ಪದ್ಧತಿ. ಈ ಕುರಿತು ಜನರಲ್ಲಿ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ.
> ಡಾ.ಆರ್.ರಂಗನಾಥ್
> ಡಿವೈಎಸ್‌ಪಿ

ಸಲಬೊಮ್ಮನಹಳ್ಳಿಯಲ್ಲಿ ಭಾನುವಾರ ರಾತ್ರಿ ಮುರುಘಾ ಶರಣರ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಡಾ.ಆರ್.ರಂಗನಾಥ್, ಮಹೇಶ್ ಚಕ್ರಸಾಲಿ, ಮಲ್ಲಿಕಾರ್ಜುನಪ್ಪ, ಶ್ರೀ ಬಸವಯೋಗಪ್ರಭು ಸ್ವಾಮೀಜಿ ಇದ್ದರು.

ಕಿಳಿಸಿದರು. ಸಮ್ಮುಖ ವಹಿಸಿದ್ದ ಎನ್.ಆರ್.ಪುರ ಬಸವಯೋಗಪ್ರಭು ಸ್ವಾಮೀಜಿ ಮಾತನಾಡಿ, ನಾವು ನೇಮಿಸುವ ಪ್ರಸಾದ ಕಾಯವನ್ನು ಕೆಡಿಸುವಂತೆ ಇರಬಾರದು. ನಾವು ದುಷ್ಟಟಗಳಿಗೆ ಒಳಗಾಗಬಾರದು ಎಂದು ಹೇಳಿದರು.

ಡಿವೈಎಸ್‌ಪಿ ಡಾ.ಆರ್.ರಂಗನಾಥ್ ಮಾತನಾಡಿ, ಅಂಧಕಾರದ ಹಿಡಿಸಿ ಜನರಲ್ಲಿ ಅರಿವಿನ ಬೆಳಕು ಮೂಡಿಸುವ ಕೆಲಸ ಶರಣರಿಂದ ಆಗುತ್ತಿದೆ. ಮೂಢ ನಂಬಿಕೆಗಳನ್ನು ತೊಲಗಿಸಿ ವೈಚಾರಿಕತೆ ಬೆಳೆಸುವ ದೃಷ್ಟಿಯಲ್ಲಿ ಮುರುಘಾ ಮಠದ ಪಾತ್ರ ದೊಡ್ಡದು ಎಂದು ಬಣ್ಣಿಸಿದರು.

ದಾನಿಗಳು ಮಹೇಶ್ ಚಕ್ರಸಾಲಿ, ಮಲ್ಲಿಕಾರ್ಜುನಪ್ಪ ಇದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಡಾ.ಅಕ್ಷತಾ ಚಕ್ರಸಾಲಿ ಸ್ವಾಗತಿಸಿದರು. ಶಿವಾನಂದಪ್ಪ ನಿರೂಪಿಸಿದರು.

30/08/2021

Those which knowledge support to human for nearer to hospitality that is Philosophy. Dr.Sharanaru blessed to devotees in the residence of advocate Sri.Pathyarajan of IUDP Layout. Ideologies rule the world, the philosophy provide peaceful life to human being. The philosophy can control the war in the world. Sri.Govinda Karjol told we must teach to children about Basavanna's Vachana.



ಚಿತ್ರದುರ್ಗದಲ್ಲಿ ಶ್ರಾವಣ ಮಾಸದ ಅಂಗವಾಗಿ ವಿಶೇಷ ನಿತ್ಯ ಕಲ್ಯಾಣ ಕಾರ್ಯಕ್ರಮ

ಬಸವಣ್ಣನ ತತ್ವ ಅನುಸರಿಸಿದರೆ ಜೀವನದಲಿ ದುಃಖವಿಲ್

ಚಿತ್ರದುರ್ಗ: ಜನ್ಮದಾತ ಶತಮಾನದ ಕ್ರಾಂತಿಕಾರಿ ಬಸವಣ್ಣನವರ ತತ್ವ ಕಾಯಕ, ದಾಸೋಹ ದತ್ತೆ ಎಲ್ಲರೂ ಬದುಕಿದಾಗ ಜೀವನದಲ್ಲಿ ದುಃಖ ಎಂಬುದೇ ಇರುವುದಿಲ್ಲ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು. ಬಿ.ಡಿಯು.ಡಿ.ಎ.ಲೇಔಟ್ ನಿವಲಿಂಗಪ್ಪ ಬಡಾವಣೆಯಲ್ಲಿರುವ ಶ್ರಾವಣ ಮಾಸದ ವಿಶೇಷ ಅಂಗ ವಾಗಿ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅನುಭವ ಮಂಟಪದ ಮೂಲಕ ಕೋಟಿಗೆ ನಿವಾರಣೆಗೆ ಶ್ರಮಿಸಿದ ಬಸವಣ್ಣನವರು ಜಲ ಕಾರ್ಯಕ್ರಮ ರೂಪಿಸಿ ಯಾವುದೇ ಲಿಂಗ ಭೇದವಿಲ್ಲದೆ ಹೆಣ್ಣು ಗಂಡು ಎಲ್ಲರೂ ಸಮಾನರು ಎನ್ನುವುದನ್ನು ಸಾರಿದರು. ಹೆಣ್ಣು, ಹೊನ್ನು, ಮಣ್ಣಿಗೆ ಯಾರು ಆಸೆ ಪಡುತ್ತಾರೋ ಅವರಿಗೆ ದುಃಖ ತಪ್ಪಿದ್ದಲ್ಲ. ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಹೋರಾಡಿದ ಮಹಾನ್ ಮೇರುತ ಬಸವಣ್ಣ ಹೆಣ್ಣು ಗಂಡಿಗಿಂತ ಒಂದಿಲ್ಲವು ಉತ್ತಮ ಸಮಾಜ ನಿರ್ಮಾಣ ಮಾಡುವ ಶಕ್ತಿ ಹೆಣ್ಣಿನಲ್ಲಿದೆ ಎನ್ನುವುದನ್ನು 900 ವರ್ಷಗಳ ಹಿಂದೆಯೇ ಹೇಳಿದ್ದರು ಎಂದರು. ನಿತ್ಯ ಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಮುರುಘಾಮಠದ ಡಾ.ಶಿವಮೂರ್ತಿ ಶರಣರು ಅತಿರ್ವತನ ನೀಡಿ ಯಾವಜ್ಞಾನಮನುಷ್ಯನನ್ನು ಸತ್ಯದಕಡೆಗೆ ಕರೆದುಕೊಂಡು ಹೋಗು ತ್ತದೋ ಅದುವೇ ತತ್ವಜ್ಞಾನ. ಬುದ್ಧ, ಬಸವ, ಗಾಂಧಿ, ಏಸು, ಅಂಬೇಡ್ಕರ್, ವೈಗಂಬರ್ ಇವರು ಗಳೆಲ್ಲಾ ಸಾಂಸ್ಕೃತಿಕ ಜಗತ್ತನ್ನು ಅನಾವರಣಗೊಳಿಸಿದರು. ಲೌಕಿಕ, ಭೌತಿಕ ವ್ಯವಹಾರಿಕ ಜ್ಞಾನ



ಚಿತ್ರದುರ್ಗದಲ್ಲಿ ಶ್ರಾವಣ ಮಾಸದ ವಿಶೇಷ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾತನಾಡಿದರು.

ಕ್ಷಣಿಕವಾದುದು, ತತ್ವಜ್ಞಾನ ಶಾಶ್ವತವಾದ ಸುಖ, ಸಂತೋಷ ನೀಡುತ್ತದೆ. ಉದಾತ್ತವಾದ ತತ್ವಜ್ಞಾನ ಸಕಲರನ್ನು ಉದ್ಧಾರ ಮಾಡುತ್ತದೆ ಎಂದು ತಿಳಿಸಿದರು. ಜಾಗತಿಕಲ್ಲಿಯಿದ್ದ ದೂಂಜೆ, ದೌರ್ಜನ್ಯ, ಹಿಂಸೆ, ಅಪಹರಣ, ಮಹಿಳೆಯ ಮಾನ ಹರಣ, ಕೊಲೆ, ಸುಲಿಗೆ, ಹತ್ಯೆ ಎಲ್ಲವೂ ನಡೆದಿದೆ. ಇವೆಲ್ಲವುಗಳನ್ನು ತಡೆಯುವ ಶಕ್ತಿ ತತ್ವಜ್ಞಾನಕ್ಕಿದೆ. ಕಾಣೂನಿನಲ್ಲಿಯೂ ತತ್ವಜ್ಞಾನವಿದೆ. ಉದಾತ್ತ, ಉತ್ಕೃಷ್ಟವಾದ ತತ್ವಜ್ಞಾನ ಇಡಿ ಜಗತ್ತನ್ನು ಸಂರಕ್ಷಣೆ ಮಾಡುತ್ತದೆ. ಮಹಿಳೆಯರ ಮಾರಾಟ ತಡೆದ ಕೀರ್ತಿ ವೈಗಂಬರ್‌ಗೆ ಸಲ್ಲುತ್ತದೆ. ಸಾಮಾಜ್ಯಶಾಹಿಗಳು ಜಗತ್ತನ್ನು ಆಳುತ್ತಿದ್ದರು. ವಸಾಹತು ಶಾಹಿಗಳು ತಮ್ಮದೆ ಆದ ದರ್ಪ ತೋರುತ್ತಿದ್ದರು. ಗತ್ತು, ಮತ್ತು ಸೇರಿದಾಗ ಮಾನವ ಸಂಕುಲಕ್ಕೆ ಕುತ್ತು ಬರುತ್ತದೆ. ಎಲ್ಲದಕ್ಕೂ ತತ್ವಜ್ಞಾನದಿಂದ

> ಹೆಣ್ಣು, ಹೊನ್ನು, ಮಣ್ಣಿಗೆ ಯಾರು ಆಸೆ ಪಡುತ್ತಾರೋ ಅವರಿಗೆ ದುಃಖ ತಪ್ಪಿದ್ದಲ್ಲ.
> ■ ಗೋವಿಂದ ಕಾರಜೋಳ, ಸಚಿವರು

ಪರಿಹಾರವಿದೆ ಎಂದರು. ಡಾನ್‌ಬೋಸ್ಕೋ ಚರ್ಚ್ ರೆವರೆಂಡ್ ಫಾದರ್ ಸೆಬ್ಬಾಸ್ಟ್ಯನ್ ಮಾತನಾಡಿ, ಜಾತಿ, ಧರ್ಮ ಮುಖ್ಯವಲ್ಲ. ಎಲ್ಲರೂ ಸಮಾನರು ಎನ್ನುವುದನ್ನು ಜನ್ಮದಾತ ಶತಮಾನದಲ್ಲಿಯೇ ಬಸವಣ್ಣನವರು ಹೇಳಿದ್ದಾರೆ. ನಾನೂ ಕೂಡ ಬಸವಣ್ಣನವರ ಅನುಯಾಯಿ. ಸಮ ಸಮಾಜ ನಿರ್ಮಾಣ ವಾಗಬೇಕೆನ್ನುವುದು ಬಸವಣ್ಣನವರ ಆಶಯವಾಗಿತ್ತು ಎಂದರು. ಹಾವೇರಿ ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ, ಇಳಕಲ್‌ನ ಗುರುಮಹಾಂತ ಸ್ವಾಮೀಜಿ ಮಾತನಾಡಿದರು. ಸಾನ್ನಿಧ್ಯವಾಹಿ ಘಾತ್ಯರಾನ್, ಫಾದರ್ ಎಂ.ಎನ್.ರಾಯ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ವ್ಯವಸ್ಥಾಪನಾ ಕಾರ್ಯದರ್ಶಿಗಳಾದ ಡಿ.ಎನ್.ಮೈತ್ರಿ ರಪ್ಪ, ಕೆ.ಪಿ.ಸಂಪತ್‌ಕುಮಾರ್, ಮಹಾಂತೇಶ ಅರಳಿ ಶಿವಮೂರ್ತಿ, ಮೋಕ್ಷ ಗುಂಡ್ರ ಸ್ವಾಮಿ, ಜೆ.ಪಿ. ಮಾಜಿ ಉಪಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ನ್ಯಾಯವಾದಿಗಳಾದ ಸುದ ಕ್ಷ, ಎಂ. ನೂರುಲ್ಲಾ, ರಿಲಾವಾದ ವಾಲ್ಮೀಂಡಿದ್ದರು.

31/08/2021

'SAMOOHA SANNI' which means the group surrenders to something. Dr.Sharanaru told to devotees about that the society committed to meaningless practices at the residence of B.Ramappa, President district Madivalara Sngha.. The movement of Sharanas main objective is gaining of Shoonya. Shoonya which means theory, it is consisted everything, and living without everything. Man is social animal, so he must follow the group lonely. We must moving in the direction of unity and we feeling. There is two parts in Samooha Sanni. Black & White. We must running with white.



ಸಮಾಜದಲ್ಲಿ ವಿವೇಕವಿಲ್ಲದ ಆಚರಣೆಗಳಿಂದ ಸಮೂಹ ಸನ್ನಿ

ಶ್ರೀ ಶಿವಮೂರ್ತಿ ಮುರುಘಾ ಶರಣರ ಅಭಿಪ್ರಾಯ | ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ರಾಮಪ್ಪ ನಿವಾಸದಲ್ಲಿ ನಿತ್ಯ ಕಲ್ಯಾಣ

03/09/2021

The Men ruled the world, but the men ruled by women. So the Women must thinking about her Rights. Dr.Sharanaru blessed to devotees in the function of Nithya Kalyana at Industrial area of Kelagote under the concept of 'Women Empowerment & Its Concept'. Women suffered from traditional practices such as Purana, Meaningless stories, Matriarchal Society is important need today. Kanyadana [Donate the Girl] in marriage ceremony. It is not donate, She is like a light to another home. So we must remove the term Kanyadana.



'ನಿತ್ಯ ಕಲ್ಯಾಣ' ಕಾರ್ಯಕ್ರಮದಲ್ಲಿ ಮುರುಘಾ ಶರಣರು

ಹಕ್ಕುಗಳ ಕುರಿತು ಮಹಿಳೆಯರು ಎಚ್ಚರವಹಿಸಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ವಿಶ್ವವನ್ನು ಪ್ರಬಲವಾದ ಪುರುಷರೇ ಆಳಬಹುದು. ಆದರೆ, ಅಂಥವರನ್ನೇ ಮಹಿಳೆಯರು ಆಳುತ್ತಾರೆ. ಇದರಲ್ಲಿ ಅನುಮಾನ ಬೇಡ. ಆದ್ದರಿಂದ ಮಹಿಳೆಯರು ತಮ್ಮ ಹಕ್ಕುಗಳ ಕುರಿತು ಮೊದಲು ಗಮನಹರಿಸಬೇಕು. ಪುರುಷರಷ್ಟೇ ಸ್ವತಂತ್ರರಾಗಿ ಬದುಕಬೇಕು' ಎಂದು ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಕೆಳಗೋಟೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ಮುರುಘಾಮಠದಿಂದ ನಡೆದ 'ನಿತ್ಯ ಕಲ್ಯಾಣ' ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ-ಅದರ ಕಲ್ಪನೆ ಏನು? ಎಂಬ ವಿಷಯ ಕುರಿತು ಮಾತನಾಡಿದ ಅವರು, 'ಸ್ತ್ರೀಯರಿಗೆ ಈವರೆಗೂ ಒಂದಿಷ್ಟು ಅನ್ಯಾಯ ಆಗಿರುವುದೇ ಪುರಾಣ, ಪುಣ್ಯಕಥೆ ಮತ್ತು ಸನಾತನ ವ್ಯವಸ್ಥೆಯಿಂದ' ಎಂದರು.

'ಸಮಾಜದಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಕಾಣಬೇಕು. ಮಹಿಳಾ ದಾಸ್ಯತ್ವ ನಮ್ಮಲ್ಲಿ ಅತಿಯಾಗಿದ್ದು, ಇದನ್ನು ಹೋಗಲಾಡಿಸಬೇಕು. ಹೆಣ್ಣು ಕೂಡ

ಚಿತ್ರದುರ್ಗದಲ್ಲಿ ಮುರುಘಾಮಠದಿಂದ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಜನರು

ದೇಶದಲ್ಲಿ ಶೇ 33ರಷ್ಟು ಮಹಿಳಾ ಮೀಸಲಾತಿ ಇನ್ನೂ ಸಾಧ್ಯವಾಗಿಲ್ಲ. ಮಹಿಳೆಯರು ಜಾಗೃತರಾಗದ ಹೊರತು ಇದು ಈಡೇರುವುದಿಲ್ಲ.
ಶಿವಮೂರ್ತಿ ಮುರುಘಾ ಶರಣರು,
ಮುರುಘಾಮಠ

ಸಬಲೀಕರಣ ಸಾಧಿಸಬೇಕಾದರೆ, ಕನ್ಯಾದಾನ ಎಂಬ ಶಬ್ದ ಕಿತ್ತುಹಾಕಬೇಕು. ಕನ್ಯಾ ದಾನವಲ್ಲ, ಮತ್ತೊಂದು ಮನೆ ಬೆಳಗುವ ನಂದಾದೀಪ ಎಂಬುದನ್ನು

ಮೇದಾರ ಕೇತೇಶ್ವರ ಗುರುಪೀಠದ ಇಮ್ಮಡಿ ಬಸವ ಕೇತೇಶ್ವರ ಸ್ವಾಮೀಜಿ, 'ಅಕ್ಕಮಹಾದೇವಿ, ಕಿತ್ತೂರು ರಾಣಿಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ವೀರವನಿತೆ ಒನಕೆ ಓಬವ್ವ, ಮದರ್ ಥೆರೆಸಾ ಹೀಗೆ ಅನೇಕರು ಇತಿಹಾಸ ಮರೆಯಲಾರದ ಸೇವೆ ಸಲ್ಲಿಸಿದ್ದಾರೆ. ಮಹಿಳೆಯರಲ್ಲೂ ಶಕ್ತಿ, ಸಾಮರ್ಥ್ಯ, ವಿಚಾರವಂತಿಕೆ ಇದ್ದು ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಿದೆ' ಎಂದರು.

ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್‌ಕುಮಾರ್, ಪತ್ರಕರ್ತ

04/09/2021

Experience is best remedy for the control of all problems, but why someone suffered from way of experience. Dr.Sharanaru blessed the devotees in the residence of Sr. ChethanBabu Sri.Rnaga Granites. Brood is a Burden; if we want to carry in easy we must remove the sense of Shoonya. Felicity is like mustard, grief like sea. Work, Prayer, extinct, experiences were discussed in Anubhavamantapa. So we must moving in the way of experiences.



ಸಂಸಾರದಲ್ಲಿ ಸದ್ಗತಿ ಕಂಡ ಶರಣರು

ಚಿತ್ರದುರ್ಗದ ಚಳ್ಳಕೆರೆ ಟೋಲ್‌ಗೇಟ್ ಬಳಿಯ ಉದ್ಯಮಿ ಚೇತನ್‌ಬಾಬು ಮನೆಯಂಗಳದಲ್ಲಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು.

■ ವಿಕ ಸುದ್ದಿಲೋಕ ಚಿತ್ರದುರ್ಗ

ಜಗತ್ತಿನ ಇತಿಹಾಸದಲ್ಲಿ ಸಂಸಾರದಲ್ಲಿದ್ದುಕೊಂಡು ಸದ್ಗತಿ ಸಾಧಿಸಿದವರು 12ನೇ ಶತಮಾನದ ಬಸವಾದಿ ಶರಣರು ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಚಳ್ಳಕೆರೆ ಟೋಲ್‌ಗೇಟ್ ಬಳಿಯ ಉದ್ಯಮಿ ಚೇತನ್ ಬಾಬು ಮನೆಯಂಗಳದಲ್ಲಿ ಶನಿವಾರ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ 'ಎಲ್ಲ ಸಮಸ್ಯೆಗಳಿಗೆ ಅನುಭವ ಪರಿಹಾರ. ಯಾಕೆ ಹಲವರು ಅನುಭವ ಮಾರ್ಗದಿಂದ ವಂಚಿತರಾಗುತ್ತಾರೆ' ವಿಷಯ ಕುರಿತು ಮಾತನಾಡಿದರು.

ಸಂಸಾರ ಅದು ಬಲುಭಾರ. ಅಷ್ಟೇ ಘೋರ. ಈ ಭಾರವಾದ ಸಂಸಾರ ಸಾರವಾಗಬೇಕಾದರೆ ಸೊನ್ನೆಯೆಂಬ ಭವವನ್ನು ತೆಗೆದುಹಾಕಲು ಎಲ್ಲರೂ ಪ್ರಯತ್ನಿಸಬೇಕು ಎಂದರು.

ಅನುಭವ ಮಾರ್ಗಕ್ಕೆ ಹೋಗುವ ಮುನ್ನ ಭವ ಇದೆ. ಭವ ಎಂದರೆ ಪ್ರಪಂಚ, ಸಂಸಾರ, ಪ್ರಾಪಂಚಿಕತೆ. ಅಲ್ಲಮಪ್ರಭು ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ. ಎನ್ನುತ್ತಾರೆ. ಈ ಭವದ ಜೀವನದಲ್ಲಿ ಸಿಗುವಂತಹ ಸುಖವಾದರು ಎಷ್ಟು ಸುಖ ಅದು ಬಂದು ಮಾತ್ರವಾಗಿದೆ. ಸಂಸಾರದಲ್ಲಿ ಪರಮಾರ್ಥದಲ್ಲಿ ಸಿಗುವಂತಹ ಬಂದು ಮಾತ್ರವಾಗಿರುವ ಸುಖಕ್ಕೆ ಸಿಂಧು ಮಾತ್ರವಾಗಿರುವ ದುಃಖವನ್ನು ಅನುಭವಿಸಬೇಕಾಗುತ್ತದೆ ಎಂದು ತಿಳಿಸಿದರು.

ಅಲ್ಲಮಪ್ರಭು ಅನುಭಾವ:

ಹಣ, ಅಧಿಕಾರ, ಭೌತಿಕತೆಯ ಜತೆ ಹೋದವರಿಗೆ ಅನುಭಾವದ ಸ್ಪರ್ಶ ಆಗುವುದಿಲ್ಲ. ಅನುಭವದ ಅನ್ವೇಷಣೆಯಾಗಬೇಕು. ಜಗತ್ತಿನಲ್ಲಿ ವೈಜ್ಞಾನಿಕ, ತಾಂತ್ರಿಕ ಅನ್ವೇಷಣೆಗಳು ನಡೆಯುತ್ತವೆ. ಅಲ್ಲಮಪ್ರಭು ಅನುಭಾವದ ಪ್ರಯಾಣ ಮಾಡಿದರು. ಮಾತ್ರವಲ್ಲ ಅಕ್ಕಮಹಾದೇವಿಯರು ಅನುಭಾವದ ಅನ್ವೇಷಣೆ. ಕಾಯಕ ವೃತ್ತಿ. ಪೂಜೆ ವೃತ್ತಿ. ವೃತ್ತಿ ಜೀವನಕ್ಕೆ ಪ್ರವೃತ್ತಿ. ಪ್ರವೃತ್ತಿಯೇ ಅನುಭವ. ಅನುಭವ ಮಂಟಪದಲ್ಲಿ ಮುಕ್ತ ಚರ್ಚೆಗಳು ನಡೆಯುತ್ತಿದ್ದವು. ಪ್ರಶ್ನೆಗಳನ್ನು ಕೇಳುತ್ತ ಉತ್ತರ ಪಡೆಯುತ್ತಿದ್ದರು ಎಂದರು.

ಸಮ್ಮುಖ ವಹಿಸಿದ್ದ ಕೂಡ್ಲಿಗೇತಿಯ ಕಲ್ಲುಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ, ಅನುಭವ ಎಂಬುದು ದೊಡ್ಡ ಪದ. ಪ್ರತಿನಿಮಿಷಕ್ಕೂ ಭವ ಇರುತ್ತದೆ. ಅನು ಎಂದರೆ ಹತ್ತಿರ. ಭವ ಎಂದರೆ ಕ್ರಯ. ಆಳವಾದ ಅಧ್ಯಯನದಿಂದ ಗಾಢವಾದ ಅನುಭವ ನಮ್ಮದಾಗುತ್ತದೆ ಎಂದರು.

ಕೊರೊನಾ ವಾರಿಯರ್ ಆಗಿ ಸನ್ಮಾನ ಸ್ವೀಕರಿಸಿದ ಡಾ.ಸುಧಾ ನಾರಾಯಣ ಮಾತನಾಡಿ, ಈಗಾಗಲೆ ಕೋವಿಡ್‌ನ 2 ಹಂತಗಳನ್ನು ದಾಟಿ ಬಂದಿದ್ದೇವೆ ಎಂದು ಹೇಳಿದರು.

ನಿವೃತ್ತ ಶಿಕ್ಷಕ ಮಲ್ಲಿಕಾರ್ಜುನಪ್ಪ ಮಾತನಾಡಿ, ಬೆಟ್ಟದಲ್ಲಿ ನೆಟ್ಟು ಬೆಳೆಸಿದ ಸುಮಾರು 800 ಗಿಡಗಳು ಇಂದು ದೊಡ್ಡ ಮರಗಳಾಗಿರುವುದು ತೃಪ್ತಿ ತಂದಿದೆ ಎಂದು ತಿಳಿಸಿದರು. ಬನವೇಶ್ವರ ಆಪ್ತಸ್ಯ ವೈದ್ಯ ಡಾ.ಗೌಸ್‌ಪಾಷರನ್ನು ಸನ್ಮಾನಿಸಲಾಯಿತು. ಕಾಮ್ಸ್, ಕಾರ್ಯಕ್ರಮ ದಾಸೋಹಿ ಚೇತನ್ ಬಾಬು, ಇತರರು ಇದ್ದರು.

07/09/2021

The Religious centers main objective is welfare of publics. Dr.Sharanaru delivered the blessings to devotees in Vishwamanava Education Institution. In the Valedictory function of Nithya Kalyana. The social welfare programs continue in society in the leadership of religious priests and political leaders. Otherwise the peoples suffer from vested interests. So many children suffered from education facilities due to Covid-19. We must support to education and build a future of our children nobody suffer from education.



ಮುರುಘಾ ಶರಣರ ಅಭಿಮತ | ನಿತ್ಯ ಕಲ್ಯಾಣ ಕಾರ್ಯಕ್ರಮದ ಸಮಾರೋಪ

ಜನ ಹಿತವೇ ಧಾರ್ಮಿಕ ಕೇಂದ್ರಗಳ ಗುರಿ

■ ವಿಜಯವಾಣಿ ಸುದ್ದಿಜಾಲ,ಚಿತ್ರದುರ್ಗ

ಧಾರ್ಮಿಕ ಕೇಂದ್ರಗಳು ಇರುವುದೇ ಜನಸಾಮಾನ್ಯರಿಗಾಗಿ. ಅವು ಕಲ್ಯಾಣದ ಹೊರತಾಗಿ ಇರಬಾರದು ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ವಿಶ್ವಮಾನವ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆ ವಸತಿ ಶಾಲಾವರಣದಲ್ಲಿ ಹಮ್ಮಿಕೊಂಡಿದ್ದ ಶ್ರಾವಣಮಾಸದ ನಿತ್ಯಕಲ್ಯಾಣ ಕಾರ್ಯಕ್ರಮದ ಸಮಾರೋಪ ಸಾನ್ನಿಧ್ಯ ವಹಿಸಿ ಮಕ್ಕಳೆ ಭೈಳವಣಿಗೆ, ವಹಿಸಬೇಕಾದ ಮುನ್ನೆಚ್ಚರಿಕೆಗಳೇನು? ವಿಷಯ ಕುರಿತು ಚಿಂತನೆ ನಡೆಸಿದರು.

ಧಾರ್ಮಿಕ ಮುಖಂಡರು, ಸಮಾಜ ಸುಧಾರಕರು ಕೈಕಟ್ಟಿ ಕುಳಿತರೆ ಗೂಂಡಾರಾಜ್ಯ ನಿರ್ಮಾಣವಾಗುತ್ತದೆ. ಜನೋಪಯೋಗಿ ಸತ್ಕಾರ್ಯಗಳು ನಿರಂತರವಾಗಿ ನಡೆಯಬೇಕು. ನಾವೆಂದೂ ಸುಮ್ಮನೆ ಕೂರುವುದಿಲ್ಲ ಎಂದರು.

ಕೋವಿಡ್ ಕಾರಣಕ್ಕೆ ಪರೀಕ್ಷೆಯಿಂದ ವಂಚಿತರಾದ ಆನೇಕ ವಿದ್ಯಾರ್ಥಿಗಳಲ್ಲಿ ಖಿನ್ನತೆ ಭಾವಿಸಿದೆ. ಅವರ ಬಲನಡಲನದ ಮೇಲೆ ಗಮನ ಹರಿಸಿ ಉತ್ತಮ ಭವಿಷ್ಯವನ್ನು ರೂಪಿಸಬೇಕಿದೆ. ಉತ್ತಮ

ಚಿತ್ರದುರ್ಗ ವಿಶ್ವಮಾನವ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆ ವಸತಿ ಶಾಲಾವರಣದಲ್ಲಿ ಸೋಮವಾರ ಮುರುಘಾ ಮಠದ ಶ್ರಾವಣಮಾಸದ ವಿಶೇಷ ಉಪನ್ಯಾಸ ಕಾರ್ಯಕ್ರಮ ನಿತ್ಯಕಲ್ಯಾಣದ ಸಮಾರೋಪ ಜರುಗಿತು. ಡಾ. ಶಿವಮೂರ್ತಿ ಮುರುಘಾ ಶರಣರು, ಬಿ.ಎಸ್.ಪರಮಶಿವಯ್ಯ ಮತ್ತಿತರರು ಇದ್ದರು.

ಶಿಕ್ಷಣದೊಂದಿಗೆ ಸಂಸ್ಕಾರವನ್ನೂ ಕಲಿಸಬೇಕಿದೆ ಎಂದು ಆಶಿಸಿದರು.


ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್.ಪರಮಶಿವಯ್ಯ ಮಾತನಾಡಿ, ಮುರುಘಾ ಶರಣರು ಪಟ್ಟಾಧಿಕಾರ ಅವಧಿಯಿಂದಲೂ ಸಾಕಷ್ಟು ಜಾಗೃತಿ ಮೂಡಿಸುತ್ತಿದ್ದಾರೆ. ಸಾಂತಮೇರ ಶ್ರೀಗಳಿಂದ ಜಯದೇವ ಶ್ರೀಗಳವರೆಗೆ ಅನೇಕ ಪೂಜಾಡಗಳು ನಡೆದಿವೆ ಎಂದರು. ಜಯದೇವ ಶ್ರೀಗಳು ಅನೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದ್ದಾರೆ. ಯಾರೂ ಕೂಡ ಶಿಕ್ಷಣದಿಂದ ವಂಚಿತರಾಗಬಾರದು. ನಾನು ಪಿರಿಕ್ಷ ವರಂಜರೆಯವನು. ಅಯೂ ಬಡವರ್ಗ ನಿದ್ಧಾಂತಗಳಿಂದಿಗೆ ಸಮಾಜವನ್ನು ಕಟ್ಟುತ್ತಿದ್ದೇನೆ ಎಂದು ಹೇಳಿದರು. ಎಸ್.ಜಲೀಲಸಾಬ್, ರಾಜಕೀಯರ್ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಶಿಪ್ಪಮ್ಮ ಪೆಂಚಪೇಶ್, ಪ್ರಸನ್ನಕುಮಾರ್, ಮರುಳಾರಾಧ್ಯ ಇದ್ದರು. ಜಮುದಾ ಕಲಾವಿದರು ಪ್ರಾರ್ಥಿಸಿದರು. ಮೋಕ್ಷಾರುದ್ರಸ್ವಾಮಿ ಸ್ವಾಗತಿಸಿದರು.

IV. CONCLUSION

Dr.Sri.Shivamurthy Sharanaru gave so many programs, movements, and awareness in our society. Dr.Sharanaru restless worker from coronation to till working for welfare of society. The heritages of Murughamath always provide all facilities to devotees. Education, Work, Dasoha [Dinning]. We gratitude and solute to Dr.Sharana's foots.

REFERENCES

[1] Field work
[2] Observation
[3] Daily papers
[4] Social Media
[5] ICT-WIKIPEDIA



10.22214/IJRASET

45.98

IMPACT FACTOR: 7.129

IMPACT FACTOR: 7.429

INTERNATIONAL JOURNAL FOR RESEARCH

IN APPLIED SCIENCE & ENGINEERING TECHNOLOGY

Call : 08813907089 (24*7 Support on Whatsapp)